ಇಟ್ಟುಕೊಂಡಿದ್ದೇನೆ. ಈ ಬಗ್ಗೆ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಸದನ ಸಮಿತಿಯನ್ನು ನಾನು ಬಹುತೇಕ ಒಂದನೇ ತಾರೀಖಿನ ದಿವಸ ಅನೌನ್ಸ್ ಮಾಡುತ್ತೇನೆ. ಈ ಚರ್ಚೆ ಇಲ್ಲಿಗೆ ಮುಕ್ತಾಯವಾಗಿದೆ. ನಾವು ಊಟ ಮುಗಿಸಿಕೊಂಡು ಬಂದು ಪುನಃ ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಈ ಸಮಿತಿಗಾಗಿ ನಾನು ಮೊದಲಿಗೆ ನಿಮಗೆ ಒಂದು ಕಂಪ್ಲೇಟ್‌ನ್ನು ಕೊಡುತ್ತಿದ್ದೇನೆ. ಆ ಸಮಿತಿಗೆ ಇದನ್ನು ಒಪ್ಪಿಸಬೇಕು. ಇದು ಆರ್. ರಾಮಕೃಷ್ಣಯ್ಯ, ಬಿನ್ ರಂಗಯ್ಯ, ಕುಲುವೇನ ಹಳ್ಳಿ, ಗ್ರಾಮ ಪಂಚಾಯಿತಿ, ನೆಲಮಂಗಲ, ಬೆಂಗಳೂರು, ಇವರ ಅರ್ಜಿ. ಇದನ್ನು ತಮಗೆ ಕೊಡುತ್ತಿದ್ದೇನೆ.

ಅಧ್ಯಕ್ಷರು :— ಈಗ ಸದನವನ್ನು ಮುಂದೂಡಲಾಗಿದೆ. ಪುನಃ 3.30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.30 ಗಂಟೆಗೆ ಸೇರಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 3.50ಕ್ಕೆ ಪ್ರಾರಂಭವಾಯಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

(2) ಬಯಲುಸೀಮೆ ಮಂಡಳಿಗೆ ಹೆಚ್ಚು ಹಣ ನೀಡುವ ಬಗ್ಗೆ

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಮೂರು ಪ್ರಾದೇಶಿಕ ಮಂಡಳಿಗಳಿವೆ. ಅದರಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿ, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ, ಈ ಎರಡು ಯೋಜನಾ ಇಲಾಖೆಗಳಿಗೆ ಸೇರಿದ ಮಂಡಳಿಗಳಿವೆ. ನಮ್ಮದು ಬಯಲುಸೀಮೆ ಅಭಿವೃದ್ಧಿ ಮಂಡಳಿ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸುಮಾರು 72 ರಿಂದ 75 ಶಾಸಕರು ಇರುವ ಕ್ಷೇತ್ರಗಳು ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಈ ಮಂಡಳಿ ರಚನೆ ಮಾಡಿದಿರಿ. ಆ ಮಂಡಳಿಯ ಆಡಳಿತ, ಹಣಕಾಸಿನ ವ್ಯವಸ್ಥೆ ಮತ್ತು ಇದರಿಂದ ನಮಗಾಗಿರುವ ಅನುಕೂಲಕಗಳ ಬಗ್ಗೆ ಚರ್ಚೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಂಡಿದ್ದರ ಮೇರೆಗೆ ನನಗೆ ತಾವು ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುತ್ತೀರಿ ಇದಕ್ಕಾಗಿ ತಮಗೆ ಮೊಟ್ಟಮೊದಲನೆಯದಾಗಿ ವಂದನೆಯನ್ನು ಅರ್ಪಿಸುತ್ತೇನೆ. ಈ ಮಂಡಳಿ ಕೇವಲ ಹೆಸರಿಗೆ ಮಾತ್ರ ಮಂಡಳಿಯಾಗಿದೆ. ಬಯಲು ಸೀಮೆಯಲ್ಲಿರುವ ಜನ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಂದ ಸುಮಾರು 70ರಷ್ಟು ವಂಚಿತರಾಗುತ್ತಿದ್ದಾರೆ. ನಮಗೆ ನೀರಾವರಿ

(ಈ ಹಂತದಲ್ಲಿ (ಶ್ರೀಮತಿ ಡಿ.ಜಿ. ಹೇಮಾವತಿ) ಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಯೋಜನೆಗಳಿಲ್ಲ, ನಮಗೆ ಅರಣ್ಯ ಪ್ರದೇಶಗಳಿಲ್ಲ, ನಮಗೆ ಯಾವುದೇ ಗಡಿ ಪ್ರದೇಶದ ಅಭಿವೃದ್ಧಿಯಲ್ಲಿ ಹಣವಿಲ್ಲ. ಟ್ರೈಬಲ್ ಸಬ್-ಪ್ಲಾನ್ ಸ್ಕೀಮ್‌ನಲ್ಲಿ ನಮಗೆ ಹಣ ಬರುತ್ತಿಲ್ಲ.

ಇದರ ಜೊತೆಗೆ ಅಭಿವೃದ್ಧಿ ಕೆಲಸಗಳಲ್ಲಿ ನಮಗೆ ಬಹಳ ತಾರತಮ್ಯ ಆಗುತ್ತಿದೆ. ಒಂದು ಕಡೆ ಜಿಲ್ಲೆಗಳಿಗೆ ಸಂಸದರ ಅನುದಾನ ಬಂದು ಜಿಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳು ಆಗಬೇಕಾಗಿತ್ತೋ ಇದರಲ್ಲಿ ಕೂಡ ಒಂದು ಕೋಟಿ ಎರಡು ಕೋಟಿ ಕೊರತೆ ಮಾಡಿ ಅವರ ವಿವೇಚನಾ ಕೋಟಾದಲ್ಲಿ ಖರ್ಚು ಮಾಡುತ್ತಿದ್ದಾರೆ. ಇನ್ನು ಇ.ಎ.ಎಸ್. ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ಇ.ಎ.ಎಸ್. ಸಮಿತಿಗಳಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳು ಬಂದ ಮೇಲೆ ಅಲ್ಲೂ ಕೂಡ ಕಾರ್ಯಕ್ರಮಗಳನ್ನು ಸರಿಯಾಗಿ ಅನುಷ್ಠಾನ ಮಾಡುವುದಕ್ಕಾಗುತ್ತಿಲ್ಲ. ರೋಜಗಾರ್ ಹಣ ಮತ್ತು ಸ್ಟ್ಯಾಂಪ್ ಡ್ಯೂಟಿ ರಿಜಿಸ್ಟ್ರೇಷನ್ ಅರಿಯರ್ಸ್ ಹಣ ಏನು ಬರುತ್ತಿತ್ತು ಇದೂ ಕೂಡ ತಾಲ್ಲೂಕು ಪಂಚಾಯಿತಿಗಳಿಗೆ, ಜಿಲ್ಲಾ ಪಂಚಾಯಿತಿಗಳಿಗೆ ನೇರವಾಗಿ ಹೋಗುತ್ತಿರುವುದರಿಂದ, ಈ ಕ್ಷೇತ್ರಗಳಿಗೆ ಶಾಸಕರು ಆಗಿರುವವರು ಪುನಃ ಆರಿಸಿ ಬರುತ್ತೇವೆಯೇ ಎನ್ನುವಂತಹ ಜಿಜ್ಞಾಸೆಗೆ ಬಂದು ಬಿಟ್ಟಿದೆ. ನಮ್ಮ ಕಡೆಯಿಂದ ಏನೂ ಕೆಲಸ ಆಗುವ ಹಾಗೆ ಇಲ್ಲ. ಯಾವುದೇ ಅಭಿವೃದ್ಧಿ ಕೆಲಸಗಳನ್ನು ಇವರ ಕಡೆಯಿಂದ ಮಾಡಿಸುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿ ಬಂದಾಗ, ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಕೆಲಸ ಮಾಡಿಸಬಹುದು ಎಂದು ನಾವೆಲ್ಲಾ ಬಹಳ ಆಶೆ ಇಟ್ಟು ಕೊಂಡಿದ್ದೆವು. ಈ ಮಂಡಳಿಗೆ ಎಂಟರಿಂದ ಎಂಟೂವರೆ ಕೋಟಿ ರೂಪಾಯಿಗಳ ಹಣವನ್ನು ಒದಗಿಸಿದ್ದರು. ಕಳೆದ ಬಾರಿ ನಾವು ಇಲ್ಲಿ ಈ ವಿಷಯದ ಬಗ್ಗೆ ಚರ್ಚೆ ಮಾಡಿದಾಗ ಅಷ್ಟು ಹಣ ಬಿಡುಗಡೆಯಾಗಲಿಲ್ಲ ಇದರಿಂದ ನಮ್ಮ ಯಾವುದೇ ಅಭಿವೃದ್ಧಿ ಕೆಲಸಗಳು ಆಗಲಿಲ್ಲ. ಒಂದೊಂದು ಕ್ಷೇತ್ರಕ್ಕೆ ಒಂಭತ್ತು ಲಕ್ಷ ರೂಪಾಯಿ ಕೊಡುತ್ತೇವೆಂದು ತಾವು ಹೇಳಿದಿರಿ, ಇದನ್ನೂ ಕೂಡ ನಾವು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಂಥ ಪರಿಸ್ಥಿತಿಯನ್ನು ಇವತ್ತು ನಿರ್ಮಾಣ ಮಾಡಿದ್ದೀರಿ ಯೋಜನೆಗಳನ್ನು ಅಪ್ರೂವ್ ಮಾಡುವಾಗ ಅವುಗಳಿಗೆ ಮಾರ್ಚ್‌ನಲ್ಲಿ ಹಣ ಬಿಡುಗಡೆ ಮಾಡಿದಿರಿ ಎಂದು ನಾವು ಸದನದಲ್ಲಿ ಒತ್ತಾಯ ಮಾಡಿದ್ದೆವು. ಅವತ್ತು ನಮ್ಮ ಸುದೈವಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಹಣಕಾಸಿನ ಮಂತ್ರಿಗಳು ಕೊರತೆಯನ್ನು ನಿಭಾಯಿಸಿ ಹೆಚ್ಚಿಗೆ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದರು. ದುರ್ದೈವದಿಂದ ನಮಗೆ ಹಣ ಜಾಸ್ತಿಯಾಗಲಿಲ್ಲ. ಇದಾದ ಮೇಲೆ ಒಂದೊಂದು ಕ್ಷೇತ್ರಕ್ಕೂ 65 ಲಕ್ಷ ರೂಪಾಯಿಗಳನ್ನು ನಬಾರ್ಡ್‌ನಿಂದ ಕೊಡಿಸುತ್ತೇವೆ ನೀವು ಯೋಜನೆಯನ್ನು ತಯಾರಿಸಿ ಕೊಟ್ಟರೆ ನಾವು ನಬಾರ್ಡ್‌ಗೆ ಕಳುಹಿಸುತ್ತೇವೆಂದು ಹೇಳಿ ನಮ್ಮ ಹತ್ತಿರ ಪಟ್ಟಿ ತೆಗೆದುಕೊಂಡರು. ನಾವೆಲ್ಲರೂ ಕುಳಿತುಕೊಂಡು ಸರ್ಕಸ್ ಮಾಡಿ 65 ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿಸಿ ಮಂಡಳಿಗೆ ಕಳುಹಿಸಿದೆವು. ಒಂದೇ ಒಂದು ರೂಪಾಯಿ ಕೂಡ ಈ ಯೋಜನೆಯಡಿಯಲ್ಲಿ ನಮಗೆ ಸಿಕ್ಕಿಲ್ಲ. ಒಂಬತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಏನು ಮಾತು ಕೊಟ್ಟಿದ್ದಾರೋ ಅದಕ್ಕನುಗುಣವಾಗಿ ನಾವು ನಮ್ಮ ಕೆಲಸಗಳನ್ನು ಬರೆದು ಕೊಟ್ಟಿದ್ದರೂ ಅದರಲ್ಲೂ ಕೂಡ ಕೆಲವೊಂದು ಕೆಲಸಗಳಿಗೆ ಮಾತ್ರ ಅಂಗೀಕಾರ ಮಾಡಿ ಇನ್ನೂ ಕೆಲವು ಕೆಲಸಗಳಿಗೆ ಅನುಮೋದನೆ ತೆಗೆದುಕೊಳ್ಳಬೇಕು. ಈ ಅನುಮೋದನೆಗೆ ಹಣ ಬಿಡುಗಡೆಯಾಗಿಲ್ಲ. ಈ ವರ್ಷದ್ದೇ ನಮಗೆ ಇನ್ನೂ ಎರಡು ಚಿಲ್ಲರೆ ಕೋಟಿ ರೂಪಾಯಿ ಕೊರತೆ ಎಂದು ಆ ಬೋರ್ಡ್‌ನವರು ಹೇಳುತ್ತಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಈ ಕಡೆಗಮನ ನೀಡಬೇಕು. ಏಕೆಂದರೆ, ಯಾವುದೇ ಸಮಸ್ಯೆ ಅವರಿಗೆ

ಗೊತ್ತಿಲ್ಲ ಎಂದಲ್ಲ ಬಹುಶಃ ಎಲ್ಲಾ ಸಮಸ್ಯೆಗಳು ಮಾನ್ಯ ಸಚಿವರಿಗೆ ಗೊತ್ತಿದೆ. ನಾವು ಮಾನ್ಯ ಸಚಿವರ ಬಗ್ಗೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೆವು ಏಕೆಂದರೆ, ನಮ್ಮ ಕಷ್ಟಕಾರ್ಪಣ್ಯಗಳು ಮಾನ್ಯ ಸಚಿವರಿಗೆ ಗೊತ್ತಿವೆ ಅವರು ಇದಕ್ಕೆಲ್ಲಾ ಇತಿಶ್ರೀ ಹಾಕುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ ಎಲ್ಲವನ್ನೂ ನಿಭಾಯಿಸುತ್ತಾರೆ ಎಂದು ನಾವು ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೇವು. ಆದರೆ ನಮ್ಮ ದುರ್ದೈವ ನಮ್ಮ 75 ಶಾಸಕರನ್ನು ಮರೆತು ಬಿಟ್ಟಿದ್ದಾರೆ. ಸಣ್ಣ ನೀರಾವರಿಗೆ ಏನಾದರೂ ದುಡ್ಡನ್ನು ಕೊಟ್ಟು ನಮ್ಮ ಭಾಗದಲ್ಲಿರತಕ್ಕಂಥ ಕೆರೆಗಳನ್ನು ಅಭಿವೃದ್ಧಿಪಡಿಸುತ್ತಿರೆಂದರೆ ಆದರಲ್ಲೂ ಕೂಡ ದುಡ್ಡಿಲ್ಲ ಎಂದು ಹೇಳುತ್ತೀರಿ. ಕಡೇ ಪಕ್ಷ ಲೋಕೋಪಯೋಗಿ ಇಲಾಖೆಗೆ ಏನಾದರೂ ಹಣ ಕೊಡುತ್ತೀರೆಂದರೆ ಅಲ್ಲೂ ಕೂಡ ಹಣ ಇಲ್ಲವೆಂದು ಹೇಳುತ್ತೀರಿ. ಕನಿಷ್ಠಪಕ್ಷ ಬಯಲುಸೀಮೆಯವರು ಎಲ್ಲರಂತಲ್ಲದಿದ್ದರೂ ಮನುಷ್ಯರಾಗಿ ಬಾಳುವುದಕ್ಕೆ ಸ್ವಲ್ಪ ಹಣ ಕೊಡಿ ಎಂದರೆ ಅದರಲ್ಲೂ ಕೂಡ ಚೌಕಾಸಿ ಮಾಡಿ ಅದೇ ಪರಿಸ್ಥಿತಿಯಲ್ಲಿ ಈ ಮಂಡಳಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ನಾವು ನಿಮ್ಮಲ್ಲಿ ಸ್ಪಷ್ಟವಾಗಿ ಕೇಳುವುದೇನೆಂದರೆ, ನಾವೇನು ಈ ಭಾಗದ 75 ಶಾಸಕರು ಈ ವಿಧಾನಸಭೆಯಲ್ಲಿ ಜನಪ್ರತಿನಿಧಿಗಳಾಗಿದ್ದೇವೆ, ನಾವು ಹಾಗೂ ನಮ್ಮ ಭಾಗದ ಜನರು ಸಹ ಕಟ್ಟತಕ್ಕಂಥ ಕಂದಾಯ ಕಟ್ಟುತ್ತಿದ್ದೇವೆ. ಇದರಿಂದ ನಮ್ಮ ಭಾಗದ ಜನರು ಕಷ್ಟಕಾರ್ಪಣ್ಯಗಳ ಬಗ್ಗೆ ನಮ್ಮ ಹೊಟ್ಟೆಪಾಡಿನ ಸ್ಥಿತಿ, ಬಗ್ಗೆ ಇವೆಲ್ಲವನ್ನೂ ತಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ನಮ್ಮ ಈ ಭಾಗದಲ್ಲಿ ಮುಖ್ಯವಾಗಿ ತೋಟಗಾರಿಕೆ ಬೆಳೆಯನ್ನು ಬೆಳೆದುಕೊಂಡು ಬರುವವರು ನಾವು, ಸ್ವಂತ ಬಂಡವಾಳ ಹಾಕಿಕೊಂಡು ನೀರಾವರಿಯನ್ನು ಮಾಡಿಕೊಳ್ಳುವವರು ನಾವು. ರಾಜ್ಯದ ಹಣವನ್ನೆಲ್ಲಾ ತೆಗೆದುಕೊಂಡು ಹೋಗಿ ನೀವು ನೀರಾವರಿ ಯೋಜನೆಗಳಿಗೆ ಖರ್ಚು ಮಾಡಬೇಕಾದರೆ, ಬಾಯಿಮುಚ್ಚಿಕೊಂಡು ಇಲ್ಲಿ ಕುಳಿತು ಮಾತನಾಡದೆ ಎದ್ದುಹೋಗತಕ್ಕಂಥವರು ನಾವು. ನಮಗೆ ಯಾವಾಗ ಅನುಕೂಲ ಮಾಡುತ್ತೀರಿ ಎಂದು ಕೇಳತಕ್ಕಂಥ ಅಧಿಕಾರ ಹಾಗೂ ಹಕ್ಕನ್ನು ನಾವು ಕಳೆದುಕೊಳ್ಳಬಾರದೆಂದು ಸ್ಪಷ್ಟವಾಗಿ ನಾವು ನಿಮ್ಮಲ್ಲಿ ಕೇಳುತ್ತಿದ್ದೇವೆ ನಾವು ಈ ರಾಜ್ಯದಲ್ಲಿ ಬದುಕಬೇಕೆ ಅಥವಾ ಬೇಡವೆ? ನೀವು ಇವತ್ತು ಕೋಟಿಗಟ್ಟಲೆ ಲೆಕ್ಕ ಹೇಳಿಕೊಂಡು ನೀರಾವರಿಗಾಗಿ ಹಣ ಖರ್ಚು ಮಾಡುತ್ತಿದ್ದರೆ, ನಮ್ಮ ಭಾಗದಲ್ಲಿ ಬರತಕ್ಕಂಥ ಕೋಲಾರ, ತುಮಕೂರು, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ ಹಾಗೂ ಇನ್ನುಳಿದ ಬಯಲ ಸೀಮೆಗಳಿಗೆ ತಾವು ಯಾವತ್ತು ಲಕ್ಷ್ಯ ಕೊಡುತ್ತೀರಿ? ತಾವು ಇಷ್ಟು ದಿವಸ ಕೃಷ್ಣಾ-ಕಾವೇರಿಯ ನೀರನ್ನು ಬಳಸಿಕೊಳ್ಳಬೇಕು ಎಂದು ನಮ್ಮ ಹಣವನ್ನೆಲ್ಲಾ ಆ ಕಡೆ ಸಂದಾಯ ಮಾಡಿದ್ದರೂ ನಾವು ಇದರ ಬಗ್ಗೆ ಚಕಾರ ಎತ್ತಲಿಲ್ಲ. ಆದರೆ, ತಾವು ನಮ್ಮ ಕಡೆ ಅಭಿವೃದ್ಧಿ ಮಾಡಬೇಕು ಎಂದು ಯಾವತ್ತೂ ದೊಡ್ಡ ಮನಸ್ಸು ಮಾಡಲಿಲ್ಲ. ತಾವು ಈ ಕಡೆ ಗಮನಹರಿಸದೇ ಈ ಭಾಗದಲ್ಲಿ ಬರತಕ್ಕಂಥ ಕ್ಷೇತ್ರಗಳು ಅಭಿವೃದ್ಧಿಯಾಗದಿದ್ದರೆ ನಾವು ಇಲ್ಲಿ ಕುಳಿತು ಏನು ಮಾಡಬೇಕು? ನಾವು ಹಾಗೆ ಉಳಿದು ಬೇರೆ ಕಡೆಯವರು ಅಭಿವೃದ್ಧಿಯಾದರೆ ಅಸಮತೋಲನವುಂಟಾಗುವುದಿಲ್ಲವೇ? ಇದು ಯಾವ ರೀತಿ ಆಗುತ್ತದೆ ಎಂದರೆ, ಒಂದು ಕಡೆ ನಾವು ಅಸಮರ್ಥರು ಎಂದು ಜನಗಳ ಮಧ್ಯೆ ಗುರುತಿಸಿಕೊಳ್ಳುತ್ತೇವೆ. ಮತ್ತೊಂದು ಕಡೆ ಎರಡು ವರ್ಗವನ್ನು ಸೃಷ್ಟಿ ಮಾಡುತ್ತಿದ್ದೇವೆ. ಇದು ತಪ್ಪಬೇಕು ಎಂದರೆ ಎಲ್ಲಾ ಪ್ರದೇಶಗಳಿಗೆ ಹಣ ಕೊಡುವಂತ ನಮ್ಮ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಹಣ

ಕೊಡಬೇಕು. ಇಲ್ಲವಾದರೆ ದಯಮಾಡಿ ಎಲ್ಲಾ ಮಂಡಳಿಗಳನ್ನು ರದ್ದುಮಾಡಿಬಿಡಿ. ಒಂದೊಂದು ಕ್ಷೇತ್ರಕ್ಕೂ ಇಷ್ಟಿಷ್ಟು ಅನುದಾನ ಕೊಡುತ್ತೇವೆ ಇಂಥ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಒಂದು ಸ್ಪಷ್ಟವಾದ ಮಾತನ್ನಾದ್ದರೂ ಹೇಳಿಬಿಡಿ. ಏಕೆಂದರೆ, ಒಂದು ಕ್ಷೇತ್ರ ಅಭಿವೃದ್ಧಿ ಮಾಡಿ, ಮತ್ತೊಂದು ಮಂಡಳಿಗೆ ಸಾಕಷ್ಟು ಅನುದಾನ ಕೊಟ್ಟು ಇನ್ನೊಂದು ಮಂಡಳಿಗೆ ಹಣವನ್ನೇ ಕೊಡದೇ ಕಛೇರಿಯನ್ನೇ ನಡೆಸದಿರತಕ್ಕಂಥ ಪರಿಸ್ಥಿತಿಯನ್ನು ನೀವಿಂದು ನಿರ್ಮಾಣ ಮಾಡಿದಿರಿ. ಇದನ್ನು ತಪ್ಪಿಸಬೇಕು ಇದನ್ನು ತಪ್ಪಿಸುತ್ತೀರೋ ಅಥವ ಇಲ್ಲವೋ ಎನ್ನತಕ್ಕಂಥದ್ದನ್ನು ತಾವು ಸ್ಪಷ್ಟಪಡಿಸಬೇಕು. ಮತ್ತೊಂದು ವಿಷಯ ಏನೆಂದರೆ, ಆಡಳಿತಾತ್ಮಕ ವಿಷಯಕ್ಕೆ ಸಂಬಂಧಪಟ್ಟಂತೆ ಯಾರನ್ನು ಕೇಳಬೇಕು ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಇವತ್ತಿನವರೆಗೆ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಖಾಯಂ ಆಗಿ ಒಬ್ಬ ಕಾರ್ಯದರ್ಶಿಯನ್ನು ನೀವು ನೇಮಕ ಮಾಡಲಿಲ್ಲ. ಇದರ ಜೊತೆಗೆ ಆ ಮಂಡಳಿಯ ಕೇಂದ್ರ ಕಛೇರಿ ಎಂದು ಚಿತ್ರದುರ್ಗದಲ್ಲಿರಿಸಿ ಅದನ್ನು ಯಾರು ಉಪಯೋಗ ಮಾಡದಂಥ ಸ್ಥಿತಿಗೆ ತೆಗೆದುಕೊಂಡು ಬಂದಿದ್ದೀರಿ. ಇವತ್ತು ಅಲ್ಲಿಗೊಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡುವುದರ ಜೊತೆಯಲ್ಲಿ ಅವರು ಅಲ್ಲಿ ಫುಲ್ ಟೈಮ್ ಕೆಲಸ ಮಾಡುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಬೇಕು. ಮಂಡಳಿಯಿಂದ ಆರು ತಿಂಗಳಿಗೊಮ್ಮೆ ಮೂರು ತಿಂಗಳಿಗೊಮ್ಮೆ ವರ್ಷಕ್ಕೊಮ್ಮೆ ಅವರು ಸಭೆ ಕರೆಯುತ್ತಾರೆ, ಮಂಡಳಿಯವರೇನೂ ಹಣ ಕೊಡುವುದಿಲ್ಲ ಸುಮ್ಮನೆ ನಾವೇಕೆ ಹೋಗಬೇಕು, ಇವರು ಸುಮ್ಮನೆ ಸಭೆ ಕರೆಯುತ್ತಾರೆಂದು ನಾವೂ ಕೂಡ ಹಾಜರಾಗಿರತಕ್ಕಂಥ ಸ್ಥಿತಿ ನಿರ್ಮಾಣವಾಗಿದೆ. ಆ ಮಂಡಳಿಯನ್ನು ಒಂದು ಗೌರವಯುತವಾದ ಸಂಸ್ಥೆಯನ್ನಾಗಿ ಉಳಿಸಿಕೊಡಬೇಕು. ಈಗಾಗಲೇ ತಾವು ಆ ಮಂಡಳಿಗಳಿಗೆ ಡಿವಿಜನಲ್ ಕಮೀಷನರ್ ಕೇಡರ್ ಇರುವವರನ್ನು ಕಾರ್ಯದರ್ಶಿಯನ್ನಾಗಿ ಹಾಕಿರುತ್ತೀರಿ, ಇಂಥ ದೊಡ್ಡ ಕೇಡರ್ ಆಫೀಸರ್ಸ್ ಅಲ್ಲಿ ಕುಳಿತುಕೊಳ್ಳುವುದೇನೂ ನಮಗೆ ಬೇಕಾಗಿಲ್ಲ. ನಿಮಗೆ ಬೇಕಾದ ಅಧಿಕಾರಿಯನ್ನು ಅಲ್ಲಿ ವರ್ಗಾಯಿಸಿ ಆ ಮಂಡಳಿ ಫುಲ್ ಟೈಮ್ ಕೆಲಸ ಮಾಡುವಂತೆ ಮಾಡಬೇಕು. ಇದರ ಜೊತೆಗೆ ಕಳೆದ ವರ್ಷ ಏನೊಂದು ಹಣ ಖರ್ಚಾಗಿರಲಿಲ್ಲ ಆ ಹಣವನ್ನು ಹೋದ ವರ್ಷ ಸರಿದೂಗಿಸಿಕೊಡುತ್ತೇವೆಂದು ತಾವು ಹೇಳಿದ್ದೀರಿ. ಈ ಸಭೆಯಲ್ಲಿ ತಾವೂ ಹಾಗೂ ಮಾನ್ಯ ಮುಖ್ಯಮಂತ್ರಿಗಳು ಕೂಡ ಜಾಸ್ತಿ ಅನುದಾನ ಕೊಡುತ್ತೇವೆಂದು ಮಾತು ಕೊಟ್ಟಿರುತ್ತೀರಿ. ಇವತ್ತು ಅಭಿವೃದ್ಧಿ ಕೆಲಸಕಾರ್ಯಗಳಲ್ಲಿ ಆಗತಕ್ಕಂಥ ತಾರತಮ್ಯವನ್ನು ನಿವಾರಣೆ ಮಾಡಬೇಕು. ಈ ಮಂಡಳಿಯ ಕಾಮಗಾರಿ ಕೆಲಸಗಳಲ್ಲಿ ಶಾಸಕರಾಗಿ ಒಂದು ಪತ್ರ ಕೊಡುವಂತಹ ಅವಕಾಶ ಇತ್ತು. ಬೇರೆ ಯಾವುದರಲ್ಲೂ ನಮಗೆ ಅವಕಾಶವಿಲ್ಲ. ಏಕೆಂದರೆ, ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಸದಸ್ಯರ ಹತ್ತಿರ ಹೋಗಬೇಕಾಗಿತ್ತು, ಇಲ್ಲವಾದರೆ, ಸಂಸದರ ಹತ್ತಿರ ಹೋಗಿ ನಮ್ಮ ಕ್ಷೇತ್ರಕ್ಕೂ ಸ್ವಲ್ಪ ಹಣ ಕೊಡಿ ಎಂದು ಕೈಮುಗಿಬೇಕಾಗಿತ್ತು. ಇವತ್ತು ನಮ್ಮ ಜಿಲ್ಲೆಗೆ ಬರುತ್ತಿರುವ ಅನುದಾನದ ಒಂದು ಕೋಟಿ ಡಿಸ್ಕ್ರಿಷನರಿ ಗ್ರ್ಯಾಂಟ್‌ನ್ನು ಖರ್ಚು ಮಾಡತಕ್ಕಂಥ ಶಕ್ತಿಯನ್ನು ಅವರಿಗೆ ಕೊಟ್ಟಿದ್ದೀರಿ. ನಿಮಗೆ ನಮ್ಮ ಮೇಲೆ ಭಾರಿ ಸೇಡಿದ್ದರೆ ಮುಂದಿನ ಸಾರಿ ಚುನಾವಣೆಗೆ ನಿಂತುಕೊಳ್ಳಬೇಡಿ ಎಂದು ಹೇಳಿದರೆ ನಾವೆಲ್ಲರೂ ಸುಮ್ಮನೆ ಆಗುತ್ತೇವೆ. ಈ ರೀತಿಯಾಗಿ ನಮ್ಮನ್ನು ಸೋಲಿಸುವುದಕ್ಕೆ ಮುಂದಕ್ಕೆ ಕಳುಹಿಸಬೇಡಿ. ಇಂತಹ ಪರಿಸ್ಥಿತಿ ಇರುವಾಗ

ನಾವು ಜನರಿಗೆ ಏನು ಉತ್ತರ ಹೇಳಬೇಕು? ಎಂ.ಪಿ.ಗಳಿಂದ ಮತ್ತು ಜಿಲ್ಲಾಪಂಚಾಯತ್ ಮೆಂಬರ್‌ಗಳಿಂದ, ಜೆ.ಪಿಎಸ್.ಗಳಿಂದ ಹಾಗೂ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರಿಂದ ಕೆಲಸ ಆಗುತ್ತದೆ. ಆದರೆ ಸನ್ಮಾನ್ಯ ಬೈರೇಗೌಡರೆ, ಇವತ್ತಿನದಿವಸ ಒಬ್ಬ ಎಂ.ಎಲ್.ಎ.ಯಿಂದ ಏನು ಕೆಲಸ ಆಗುವುದಿಲ್ಲ ಎಂಬ ಸ್ಥಿತಿಗೆ ನಾವು ಬಂದಿದ್ದೇವೆ. ನಾನು ಈಗಾಗಲೇ ಹೇಳಿದ ಹಾಗೆ ಇವತ್ತಿನ ದಿವಸ ಏಪಿಎಂಸಿ ಡೈರೆಕ್ಟರ್ ಕೂಡ ರೋಡ್ ಮಾಡುವುದಕ್ಕೆ ಸಮರ್ಥರಾಗಿದ್ದಾರೆ. ಇವರೆಲ್ಲರೂ ಕೋಟಿಗಟ್ಟಲೆ ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ :— ಯಾರು ಮಾಡಿದರೂ ನಿಮ್ಮ ತಾಲ್ಲೂಕಿಗೇ ಕೆಲಸ ಆಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಯಾರು ಮಾಡಿದರೂ ನಮ್ಮ ತಾಲ್ಲೂಕಿಗೆ ಕೆಲಸ ಆಗುವುದು. ಆದರೆ ಇದಕ್ಕೆ ರಾಜಕೀಯದ ಲೇಪನ ಮಾಡದಿದ್ದರೆ ನಾವು ಸಂತೋಷ ಪಡುತ್ತೇವೆ. ಇದಕ್ಕೆ ಒಂದು ಸಿಲ್ವರ್ ಕೋಟ್ ಮಾಡದೇ, ಫಳಫಳ ಎಂದು ಹೊಳೆಯುವ ಚಿನ್ನವನ್ನು ತಂದಿಟ್ಟಿದ್ದರೆ ನಮಗೆ ತುಂಬ ಸಂತೋಷವಾಗುತ್ತಿತ್ತು.

ಶ್ರೀ ಸಿ. ಬೈರೇಗೌಡ :— ರಾಜಕೀಯ ದೃಷ್ಟಿಯಿಂದ ಕೆಲಸ ಆಗುತ್ತದೆಂದು ತಾವು ಹೇಳುವುದಾದರೆ, ಈಗ ಇರತಕ್ಕಂಥ ವಿವೇಚನ ನಿಧಿಯ ಯೋಜನೆಯನ್ನು ತೆಗೆಯಬೇಕೆಂದು ತಮ್ಮ ಅಭಿಪ್ರಾಯವೇ?

ಶ್ರೀ ಜೆ.ಸಿ. ಮಾಧುಸ್ವಾಮಿ :— ದಯಮಾಡಿ ತೆಗೆದು ಬಿಡಿ. ಸಮಗ್ರ ರಾಜ್ಯದ ಅಭಿವೃದ್ಧಿಗೆ ಯೋಜನೆ ಮಾಡಿ. ನೀವು ಕೊಡುವುದಾದರೆ ಕೊಡಿ. ಆದರೆ, ನಮಗೂ ಮಾನ ಮರ್ಯಾದೆ ಉಳಿಸುವಂತಹ ಸ್ಥಿತಿ ಮಾಡಿ ಎಂದೇ ನಾನು ಆರಂಭದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇವತ್ತು ಕೇಂದ್ರ ಸರ್ಕಾರದ ಇಎಎಸ್‌ನಲ್ಲಿ ಜಿಲ್ಲಾಪಂಚಾಯತ್ ಮೆಂಬರ್ ಬರೆದುಕೊಟ್ಟರೂ ಲಕ್ಷ ರೂಪಾಯಿಯ ಕೆಲಸ ಆಗುತ್ತದೆ. ಬೇಕಾದರೆ ನೀವೇ ಬಂದು ನೋಡಿ.

ಶ್ರೀ ಸಿ. ಬೈರೇಗೌಡ :— ಇ.ಎ.ಎಸ್. ಎಂದರೆ, ಉದ್ಯೋಗ ದೃಢೀಕರಣ ಯೋಜನೆ. ಆ ಪದದಲ್ಲಿಯೇ ಅದರ ಅರ್ಥ ಇದೆ. ಇಲ್ಲಿ ಬಂದು ಕೆಲಸ ಕೇಳಿದವರಿಗೆ ಕೆಲಸ ಕೊಡತಕ್ಕಂಥ ಒಂದು ಯೋಜನೆ. ಇದು ಕಾಗದದ ಮೇಲೆ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಸಚಿವರೇ, ಅದರ ನಾರ್ಮ್ಸ್ ನಮಗೆ ಚೆನ್ನಾಗಿ ಗೊತ್ತು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಕಾಗದದ ಮೇಲೆ ಇದೆ. ಆದರೆ, ಆ ರೀತಿ ಏನೂ ನಡೆಯುತ್ತಿಲ್ಲ. ಇ.ಎ.ಎಸ್.ನಲ್ಲಿ ಏನು ನಡೆಯುತ್ತದೆಂದು ನಮ್ಮೆಲ್ಲರಿಗಿಂತಲೂ ನಿಮಗೆ ಚೆನ್ನಾಗಿ ಗೊತ್ತಿದೆ. ಅಲ್ಲಿ ಬರತಕ್ಕಂಥ ಹಣದಲ್ಲಿ 15 ಸಾವಿರದಿಂದ 20 ಸಾವಿರದವರೆಗೆ ಹಂಚಿಕೊಂಡು, ಇವತ್ತಿನದಿವಸ ಒಂದು ಕಿ.ಮೀ. ರಸ್ತೆ ಮಾಡುವುದಕ್ಕೂ ಬಿಡುವುದಿಲ್ಲ. ಆ ರೀತಿಯ ಪರಿಸ್ಥಿತಿ ಅಲ್ಲಿದೆ ಎಂಬುದು ತಮಗೂ ಚೆನ್ನಾಗಿ ಗೊತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಅದರಲ್ಲಿರತಕ್ಕಂಥ ನಾರ್ಮ್ಸ್ ನಮಗೆಲ್ಲಾ ಗೊತ್ತು, ಡಿಸ್ಟ್ರಿಕ್ಟ್‌ನಲ್ಲಿ ಪಿಎಎಸ್ ಕಮಿಟಿ ಇರುವುದು, ತಾಲ್ಲೂಕುಗಳಲ್ಲಿ ಇಎಎಸ್ ಕಮಿಟಿ

ಇರುವುದು ಗೊತ್ತು. ಪ್ರಾಜೆಕ್ಟ್ ಮಾಡಬೇಕೆಂಬುದು ಅದು ಅನುಮೋದನೆ ಆಗಬೇಕೆಂದು ಗೊತ್ತು, ಎರಡು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಹಣ ಬರಬೇಕೆಂದು ಗೊತ್ತು ಮತ್ತು ಅಡಿಷನಲ್ ಲಿಸ್ಟ್ ಇನ್‌ಸ್ಟಾಲ್‌ಮೆಂಟ್‌ನಲ್ಲಿ 23 ಕೋಟಿ ರೂಪಾಯಿ ನಿಮಗೆ ಬಂದಿಲ್ಲ ಎಂಬುದು ನಮಗೆ ಗೊತ್ತು. ಇವತ್ತಿನ ದಿವಸ ಇದೆಲ್ಲಾ ಗೊತ್ತಿರುವುದರಿಂದಲೇ ಇಲ್ಲಿ ಮಾತನಾಡುತ್ತಿದ್ದೇನೆ. ಆದರೆ ಇವತ್ತು ಕೆಲಸಗಳನ್ನು ಗುರ್ತಿಸುವ ಕಡೆ ಸಮತೋಲನ ಇಲ್ಲ. ಇವತ್ತು ಯಾರ್‍ಯಾರಿಗೆ ಕೆಲಸ ಮಾಡಿಸುವುದಕ್ಕೆ ಶಕ್ತಿ ಇದೆ, ಅಂಥ ಶಾಸಕರಿಂದಲೂ ಏನೂ ಆಗುವುದಿಲ್ಲ ಎನ್ನುವಂತಹ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಕನಿಷ್ಟಪಕ್ಷ ಕನ್ಸರ್ವೇಶನ್ ಆಫ್ ಲ್ಯಾಂಡ್; ಸಾಯಿಲ್ ಮತ್ತು ವಾಟರ್ ಕನ್ಸರ್ವೇಶನ್‌ನ್ನಾದರೂ ನಾವು ಮಾಡಿಸುತ್ತಿದ್ದೆವು. ಆದರೆ ಇವತ್ತು ಇದಕ್ಕೂ ದುಡ್ಡು ಇಲ್ಲದಂತೆ ಮಾಡಿದ್ದೀರಿ ಮತ್ತು ರೋಡ್ ಮಾಡುವುದಕ್ಕೂ ದುಡ್ಡಿಲ್ಲದಂತೆ ಮಾಡಿದ್ದು, ಇವತ್ತು ಏನಾದರೂ ಒಂದು ಕಾರ್ಯಕ್ರಮ ಮಾಡಬೇಕಾದರೆ ಆಗುತ್ತಿಲ್ಲ. ಇವತ್ತಿನದಿವಸ ನೀವೇ ಮಾಡಿ ನೋಡೋಣ? ಈಗ ಡಿಸ್ಕ್ರಿಷನರಿ ಗ್ರ್ಯಾಂಟ್ ಬೇಡ ಎಂದರೆ, ಎಂಪಿ ಗ್ರ್ಯಾಂಟ್ ನಿಲ್ಲಿಸುವುದಕ್ಕೆ ರೆಸಲ್ಯೂಷನ್ ಮಾಡಿ. ಇದು ಆ ಜಿಲ್ಲೆಯ ಅಭಿವೃದ್ಧಿಗೆ ಬರುತ್ತಿದ್ದ ಹಣ, ಇದಕ್ಕೋಸ್ಕರ ಎಕ್ಸ್‌ಟ್ರಾ ಕೊಟ್ಟಿಲ್ಲ. ಎಂಪಿಗಳು ಇವತ್ತು ತಮ್ಮ ಇಚ್ಛೆಗೆ ಅನುಸಾರವಾಗಿ ಖರ್ಚು ಮಾಡುತ್ತಿದ್ದಾರೆ. ಆದರೆ ನಮಗೆ ಇಲ್ಲಿ ದುರ್ದೈವ ಎಂದು ಕಾಣುತ್ತದೆ. ಎಂ.ಪಿ.ಗಳು ಸ್ಟೇಟ್ ಡೆವಲಪ್‌ಮೆಂಟ್‌ಗೆ ನೇರವಾಗಿ ಪಾತ್ರಧಾರಿಗಳಾಗಿ ಆಗಬಾರದಿತ್ತು. ಇವತ್ತು ಪಬ್ಲಿಕ್ ವರ್ಕ್ಸ್‌ನ್ನು ಯಾರು ಅಭಿವೃದ್ಧಿ ಮಾಡುತ್ತಿದ್ದಾರೆ? ಇದನ್ನು ಯಾರು ನೋಡಬೇಕು? ಇದು ನಿಮ್ಮ ಲಿಸ್ಟ್‌ನಲ್ಲಿರುವ ವಿಷಯ. ಇವತ್ತಿನದಿವಸ ಪ್ರತಿಯೊಂದು ಸ್ಟೇಜ್‌ನಲ್ಲಿಯೂ ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ಆದರೆ, ಶಾಸನಸಭೆ ಸದಸ್ಯರು ಏನಾದರೂ ಕೇಳಿದರೆ ಇಲ್ಲಿ ಏನೂ ನಡೆಯುವುದಿಲ್ಲ. ಯುದ್ಧ ಮಾಡುವಾಗ ರಾಮನ ಕತೆ ಯಾರೂ ಕೇಳುವುದಿಲ್ಲ. ಅವನು ಮರೆಯಲ್ಲಿ ನಿಂತುಕೊಂಡು ಬಾಣ ಬಿಟ್ಟಿದ್ದಾನೆ ಮತ್ತು ಯಾರನೋ ಉಪಯೋಗಿಸಿಕೊಂಡು ಅಣ್ಣನನ್ನು ಕೊಂದು ತಮ್ಮನನ್ನು ಜೊತೆಯಲ್ಲಿ ಹಾಕಿಕೊಂಡಿದ್ದನು. ಇದನ್ನೆಲ್ಲಾ ಮಾಡಿ ಯುದ್ಧ ಗೆಲ್ಲಬೇಕಾಗುತ್ತದೆ. ದಯಮಾಡಿ ಇತ್ತ ಕಡೆ ಸರ್ಕಾರ ಲಕ್ಷ್ಯಕೊಡಬೇಕು. ಇದು ತಮ್ಮ ಕೈಯಲ್ಲಿದೆ. ಮಾನ್ಯ ಬೈರೇಗೌಡರು ಕೃಷಿಮಂತ್ರಿಗಳಾದಾಗ ನಮ್ಮನ್ನೆಲ್ಲಾ ಕರೆದು ಸಭೆ ಮಾಡಿ, ರೈತರ ಫೋರಂ ಮಾಡೋಣ ಎಂದು ಹೇಳಿದ್ದೀರಿ. ಈಗ ಏನೂ ಮಾಡದೆ ಇನ್ನು 5-6 ತಿಂಗಳ ನಂತರ ವಾಪಸ್ಸು ಹೋಗುವುದಕ್ಕೆ ಮಾಡಿದ್ದೀರಿ. ಇದು ಸರಿಯೇ? What is the positive effort of your being the Agriculture Minister for 5 years ಎಂದರೆ, ನಿಮ್ಮ ಕ್ಷೇತ್ರದಲ್ಲಿ ಹೋಗಿ ನೀವು ಏನು ಹೇಳುತ್ತೀರಿ? ನಮ್ಮನ್ನು ಬಿಟ್ಟುಬಿಡಿ, ಏಕೆಂದರೆ ನಾವು ಯಾರಿಗೂ ಬೇಡದೆ ಗೆದ್ದು ಬಂದವರು. ಇಷ್ಟೆಲ್ಲಾ ಅಧಿಕಾರ ಮಾಡಿ ಇಲ್ಲಿ ಕುಳಿತುಕೊಂಡು ಹೋರಾಟ ಮಾಡಿದ ನೀವು ನಿಮ್ಮ ಕ್ಷೇತ್ರಕ್ಕೆ ಹೋಗಿ ಏನು ಹೇಳುತ್ತೀರಿ? ಏನಾದರೂ ಒಂದನ್ನು ಹೋಗಿ ನಾಳೆದಿವಸ ಹೇಳಲೇಬೇಕಲ್ಲವೇ? ತಾವು ಬಯಲು ಸೀಮೆಯಿಂದಲೇ ಬಂದಿರುವವರು, ನಿಮ್ಮ ಕಡೆ ನಾಲೆ ಬರಲಿಲ್ಲ, ಸಮುದ್ರದ ದಂಡೆಯಲ್ಲಿಯೂ ಇಲ್ಲ ಅಥವಾ ಮಲೆನಾಡು ಇಲ್ಲ, ನೀವು ನಮ್ಮ ಜೊತೆಯಲ್ಲಿ ಉತ್ತರ ಹೇಳಬೇಕಾಗುತ್ತದೆ. ಆದುದರಿಂದ ತಾವು ಆ ಕಡೆ ಲಕ್ಷ್ಯ ಕೊಡಬೇಕು.

ಶ್ರೀ ಜಿ. ಚಂದ್ರಣ್ಣ:— ಸರ್ಕಾರ ಆ ರೀತಿಯಾಗಿ ಕಂಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಆ ರೀತಿ ಇದೆ. ಆದರೆ ಕಬ್ಬಿಣ ಪೆಟ್ಟಿಗೆಯ ಬೀಗ ತೆಗೆಯುವುದಿಲ್ಲ ಎನ್ನುತ್ತಾರೆ. ಅಷ್ಟೆ. ಕಬ್ಬಿಣ ಪೆಟ್ಟಿಗೆಯ ಬೀಗ ತೆಗೆಯಿರಿ ಎಂದರೆ, ಇಲ್ಲ ಮಗನೇ ದೂರ ಇರು ಎನ್ನುತ್ತಾರೆ. ಕೆಲವರಿಗೆ ಬಾರೋ ಮಗನೆ ಎಂದು ಬೆನ್ನು ತಟ್ಟುತ್ತಾರೆ. ಸ್ವಂತ ಅಪ್ಪ ಮಗನ ಬೆನ್ನು ತಟ್ಟಿಬಿಟ್ಟರೆ ಹೊಟ್ಟೆ ತುಂಬುತ್ತದೆಯೇ? ಚಾಕ್‌ಲೇಟ್ ಒಂದನ್ನು ಕೊಡಿ, ತಿಂದು ಬಾಯಿ ಚಪ್ಪರಿಸಲಿ. ಇವತ್ತು ನಮ್ಮ ಬಯಲುಸೀಮೆ ಕಡೆ ಲಕ್ಷ ಕೊಡಬೇಕು. ನಮಗೆ ಸಮಯದ ಕೊರತೆ ಇರುವುದರಿಂದ ಹಾಗೂ ಈ ವಿಷಯವನ್ನು ಇನ್ನು ಮೂರ್‍ನಾಲ್ಕು ಜನ ಸದಸ್ಯರು ಪ್ರಸ್ತಾಪ ಮಾಡಬೇಕಾಗಿರುವುದರಿಂದ, ನಾವು ಸನ್ಮಾನ್ಯ ಅರ್ಥ ಸಚಿವರನ್ನು ನೇರವಾಗಿ ಕೇಳುವುದಕ್ಕೆ ಇಷ್ಟಪಡುತ್ತೇವೆ. ಈ ಹಿಂದಿನ ಶಾಸನ ಸಭೆಯಲ್ಲಿ ಮಾನ್ಯ ಸಿದ್ಧರಾಮಯ್ಯನವರು ಮುಂದಿನ ಸಲ ಜಾಸ್ತಿ ಮಾಡುತ್ತೇವೆಂದು ಮಾತು ಕೊಟ್ಟಿದ್ದರು. ತಾವು ಮಾತು ಕೊಟ್ಟಿದ್ದು ಸತ್ಯವೇ ಅಥವಾ ಇಲ್ಲವೇ? ಈ ಸಲ ಬಜೆಟ್‌ನಲ್ಲಿಯೂ ಕೂಡ ಜಾಸ್ತಿ ಮಾಡಲಿಲ್ಲ ಏಕೆ? ಹೋದ ಸಲ ಬಜೆಟ್‌ಗಿಂತ ಮುಂಚೆಯೇ ಜಾಸ್ತಿ ಮಾಡಬೇಕೆಂದು ನಾವು ಡಿಮ್ಯಾಂಡ್ ಮಾಡಿದ್ದೆವು. ಈ ಸಾರಿಯೂ ಮಾಡಲೇ ಬಾರದೆಂದು ನಿಮಗೆ ಮನಸ್ಸಿದ್ದರೆ ಅದು ನಿಮ್ಮ ಇಷ್ಟ. ಕೊಡಿ ಎಂದು ಕೇಳಬಹುದು ಅಥವಾ ಕೊಡಿ ಸ್ವಾಮಿ ಎಂದು ಬೇಡಬಹುದು. ಇದನ್ನು ಬಿಟ್ಟು ಬೇರೆ ಏನು ಮಾಡುವುದಕ್ಕೆ ಆಗುತ್ತದೆ? beggars have no choice... ಎಂದು ಇಂಗ್ಲಿಷನಲ್ಲಿ ಗಾದೆ ಇದೆ. ಬೇಡುವವರಿಗೆ ಚಾಯ್ಸ್ ಇಲ್ಲ, ನೀವು ಕೊಡುವವರಿಗೆ ಏನಾದರೂ ಚಾಯ್ಸ್ ಇದ್ದರೆ ಇರಬಹುದು. ನಿಮಗೆ ಏಕೋ ಇಚ್ಛೆ ಇಲ್ಲವೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಒಂದು ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಾವು ಇಷ್ಟರಿಂದಲೇ ರಾಜಕಾರಣದಿಂದ ನಿವೃತ್ತರಾಗುವುದಿಲ್ಲ, ಇದನ್ನೇ ಒಂದು ಹೋರಾಟವಾಗಿ ಆರಂಭ ಮಾಡಿಕೊಳ್ಳುತ್ತೇವೆ. ಇಲ್ಲಿ, ನಮ್ಮವರೇ ಹಾಗೂ ರೈತರ ಮಕ್ಕಳೇ ಇದ್ದು ಮತ್ತು ಬಯಲುಸೀಮೆಯವರೇ ಇದ್ದುಕೊಂಡು ನಮ್ಮ ಕುತ್ತಿಗೆಯನ್ನು ಎಷ್ಟು ಚೆನ್ನಾಗಿ ಹಿಸುಕಿದ್ದಾರೆಂದು ಹಾಗೂ ನಾವು ಯಾರನ್ನು ಅಧಿಕಾರಕ್ಕೆ ತರಬೇಕೆಂದು ಆಸೆಪಟ್ಟಿದ್ದೆವೋ ಅವರೆಲ್ಲರೂ ಯಾರಾಯಾರ ಸೇವೆ ಮಾಡಿ ಮನೆಗೆ ಹೋಗಿದ್ದಾರೆ ಎಂಬುದನ್ನು ನೋಡಿ ಎನ್ನುವ ಸ್ಥಿತಿಯನ್ನು ಮಾಡುತ್ತೀರಾ?

ಶ್ರೀ ಜಿ. ಚಂದ್ರಣ್ಣ:— ನಿಮ್ಮ ಕ್ಷೇತ್ರದಲ್ಲಿಯೇ ಹೋರಾಟ ಮಾಡುತ್ತೀರಾ?

ಶ್ರೀ ಜೆ.ಸಿ. ಮಾಧುಸ್ವಾಮಿ :— ಹೋರಾಟ ಮಾಡುವುದಕ್ಕೆ ಕ್ಷೇತ್ರಕ್ಕೆ ಏಕೆ ಹೋಗಬೇಕು? ನಾವಿರುವ ಹತ್ತಿರವೇ ಮಾಡುತ್ತೇವೆ. ನಮ್ಮ ಮೇಲೆ ಬಹಳ ಆಸೆ ಇಟ್ಟುಕೊಂಡು ಕುತ್ತಿಗೆಯನ್ನು ಎಷ್ಟು ಚೆನ್ನಾಗಿ ಹಿಸುಕಿದ್ದಾರೆಂದು ಹಾಗೂ ನಮ್ಮನ್ನು ತೆಗೆದುಕೊಂಡು ಹೋಗಿ ಕಂಡವರ ಮನೆಯಲ್ಲಿ ಆಳಾಗಿ ಏಕೆ ಮಾಡಿದ್ದೀರೆಂದು ಹೇಳಿಕೊಂಡು ತಿರುಗಾಡಬೇಕಾಗುತ್ತದೆ. ಈ ಶಾಸನಸಭೆಯಲ್ಲಿ ಇವತ್ತು ಸುಮಾರು 72 ರಿಂದ75 ಶಾಸಕರ ಕ್ಷೇತ್ರದ ಕಡೆ ತಾವು ಲಕ್ಷ್ಯ ಕೊಡಲಿಲ್ಲವೆಂದರೆ ಅದಕ್ಕಿಂತ ದುರ್ದೈವದ ಸಂಗತಿ ಏನೂ ಇಲ್ಲ. ದಯಮಾಡಿ ಇವತ್ತೆ ಹೇಳಿಕೆ ಕೊಡಬೇಕು. ನಾವು ಕೇಳುತ್ತಿರುವುದು ಮೊದಲು ಹಣ, ನೀವು ಹಣ ಕೊಟ್ಟರೆ ನಾವು ಕಾರ್ಯಕ್ರಮಗಳನ್ನು ಮಾಡುತ್ತೇವೆ. ಬಯಲುಸೀಮೆ

ಅಭಿವೃದ್ಧಿ ಮಂಡಳಿಗೆ ನಬಾರ್ಡ್‌ನಿಂದ 65 ಲಕ್ಷ ರೂಪಾಯಿಗಳನ್ನು ಗ್ಯಾರಂಟಿ ಕೊಟ್ಟು ಹಣ ತರುತ್ತೇವೆಂದು ಹೇಳಿದ್ದೀರಿ. ಆದುದರಿಂದ, ಆ ಯೋಜನೆಯನ್ನು ಅಪ್ರೂವ್ ಮಾಡಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ಕೆಲಸ ಮಾಡುವಂತೆ ಮಾಡಬೇಕು. ಒಂದು ಬೋರ್ಡ್ ಮಾಡಿ, ಅಧ್ಯಕ್ಷರಿಗೆ ಒಂದು ಕಾರು ಕೊಟ್ಟು, ಅಲ್ಲಿರು ಎಂದು ಹೇಳಿದಾಕ್ಷಣ ಅದಕ್ಕೆ ಬೋರ್ಡ್ ಅಂತೀರಾ? ಇವತ್ತಿನವರೆಗೆ ಅಲ್ಲಿ ಒಬ್ಬ ರೆಗ್ಯೂಲರ್ ಸೆಕ್ರೆಟರಿ ಕೊಟ್ಟಿಲ್ಲ. ತಾವು ಹಾಕಿರುವ ಡಿವಿಜನಲ್ ಕಮೀಷನರ್‌ರವರು, ಆಫೀಸ್‌ಗೆ ಇವತ್ತಿನವರೆಗೆ ಹೋಗಿಲ್ಲ. ಡಿವಿಸಿಯವರು ಹೋಗುವುದಿಲ್ಲವೆಂದು ಅಲ್ಲಿ ಡಿ.ಸಿ.ಯವರಿಗೆ ಚಾರ್ಜ್‌ನಲ್ಲಿಟ್ಟಿದ್ದೀರಿ. ಅವರು ಡಿ.ಸಿ. ಕೆಲಸ ಮಾಡುವುದನ್ನು ಬಿಟ್ಟು ಇಲ್ಲಿ ಅವರಿಗೆ ಆಸಕ್ತಿ ಇಲ್ಲ. ಇಂಥ ಸ್ಥಿತಿ ನಿರ್ಮಾಣ ಮಾಡಿದ್ದೀರಿ. ನಾವು ಬಹಳ ಗಹನವಾಗಿ ಮತ್ತು ತೀವ್ರವಾಗಿ ತೆಗೆದುಕೊಂಡಿರುವ ವಿಷಯ. ತಾವು ದಯಮಾಡಿ ಇವತ್ತಿನ ಅನುದಾನದಲ್ಲಿ ಜಾಸ್ತಿ ಮಾಡುವುದಕ್ಕೆ ಈಗಲೇ ಆದೇಶವನ್ನು ಹೊರಡಿಸಿ, ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಂಜನಿಯರ್‌ಗಳು ಸುಮಾರು 30 ರಿಂದ 35 ದಿವಸ ಸ್ಟ್ರೈಕ್ ಮಾಡಿದ್ದಾರೆ. ಆದ್ದರಿಂದ ಅಷ್ಟು ದಿವಸವನ್ನು ಮುಂದಕ್ಕೆ ಹಾಕಿ, ಮಾರ್ಚ್ 31ಕ್ಕೆ ಮುಗಿಯಬೇಕಾದ ಕೆಲಸಗಳನ್ನು ಏಪ್ರಿಲ್ 15 ಅಥವಾ ಮೇ 15ರವರೆಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟು, ಈಗ ಯಾವ್ಯಾವ ಕಾಮಗಾರಿಗಳಿಗೆ ಅನುಮೋದನೆ ಆಗಿದೆಯೋ ಆ ಎಲ್ಲಾ ಕಾಮಗಾರಿಗಳನ್ನು ಮುಗಿಸುವುದಕ್ಕೆ ಅನುವುಮಾಡಿಕೊಡಬೇಕೆಂದು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಛೇರ್ಮನ್‌ರವರೆ, ನಾವು ಬಯಲು ಸೀಮೆ ವಿಷಯವನ್ನು ಈ ಸದನದಲ್ಲಿ ಸುಮಾರು ಸಾರಿ ಚರ್ಚೆ ಮಾಡಿದ್ದೇವೆ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸನ್ಮಾನ್ಯ ಭೈರೇಗೌಡರು ಈ ಮಂಡಳಿಗೆ ಮೊದಲನೆ ಅಧ್ಯಕ್ಷರಾಗಿ ಎರಡು ಸಲ ಮೀಟೀಂಗ್ ಮಾಡಿದ್ದರು. ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಒಂದು ಸಭೆ ಮಾಡಿ ಮಂತ್ರಿಗಳನ್ನು ಕರೆದು 25 ಕೋಟಿ ರೂಪಾಯಿ ಗ್ಯಾರಂಟಿ ಕೊಡುತ್ತೇವೆಂದು ಮಾನ್ಯ ಭೈರೇಗೌಡರ ಮುಂದೆಯೇ ಆಶ್ವಾಸನೆ ಕೊಟ್ಟಿದ್ದರು. ಆದರೆ ಇದುವರೆಗೂ ಅದು ಜಾರಿಯಾಗಲಿಲ್ಲ. ಮಾನ್ಯ ದೇವೇಗೌಡರು ಹೋದ ನಂತರ ಸನ್ಮಾನ್ಯ ಪಟೇಲರು ಮುಖ್ಯಮಂತ್ರಿಗಳಾದ ಮೇಲೆ, ಇವರನ್ನು ಬಯಲು ಸೀಮೆಗೆ ಕರೆದುಕೊಂಡು ಹೋಗಿ ಸಭೆ ಮಾಡಿ ಕೇಳಿದಾಗ, ಅವರು ಆಶ್ವಾಸನೆ ಕೊಟ್ಟರು ಮತ್ತು ಮಾನ್ಯ ಸಿದ್ಧರಾಮಯ್ಯನವರು ಎರಡು-ಮೂರು ಸಲ ಸದನದಲ್ಲಿಯೇ ಆಶ್ವಾಸನೆ ಕೊಟ್ಟಿದ್ದಾರೆ. ಹೇಳಿಲ್ಲವಂತೆ, ಏನು ಮಾಡುವುದು? ತಾವು

(ಗೊಂದಲ)

ಹೇಳಿದ್ದೀರಿ ಬೇಕಾದರೆ ದಾಖಲೆ ತೆಗೆ ನೋಡಿದರೆ ಗೊತ್ತಾಗುತ್ತದೆ. ಇಷ್ಟೆಲ್ಲಾ ಆದರೂ ಕೂಡ ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಏಕೆ ಈ ರೀತಿ ದೃಷ್ಟಿ ಇದೆ? ಬಹುಶಃ ಮಾನ್ಯ ವೀರಪ್ಪಮೊಯಿಲಿಯವರ ಕಾಲದಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಚನೆಯಾಗಿ ಆಕ್ಟ್ ಆಯಿತು. ಇವತ್ತು 72 ಜನ ಶಾಸಕರು ಬಯಲು ಸೀಮೆ ಅಭಿವೃದ್ಧಿ

ಮಂಡಳಿಯ ಸದಸ್ಯರು. ಇದೊಂದು ರೀತಿ ಮಿನಿ ವಿಧಾನಸೌಧ ಇದ್ದ ಹಾಗೆ ಇರುತ್ತದೆ. ಈ ಅಭಿವೃದ್ಧಿ ಮಂಡಳಿಯನ್ನು ಪ್ರಾರಂಭ ಮಾಡಿದಂಥ ನೀವು ಇದರ ಬಗ್ಗೆ ಸರಿಯಾದಂತಹ, ಪ್ರಾಮಾಣಿಕವಾದಂತಹ ಕಾಳಜಿ ಇಲ್ಲದೇ ಇದ್ದಾಗ ಮತ್ತು ಇದಕ್ಕೆ ಹಣ ಕೊಡತಕ್ಕಂಥ ವ್ಯವಸ್ಥೆ ಇಲ್ಲದೇ ಇದ್ದಾಗ, ನೀವು ಆ ಮಂಡಳಿಯನ್ನು ರಚನೆ ಮಾಡದೇ ಇದ್ದಿದ್ದರೆ ಏನು ತೊಂದರೆ ಆಗುತ್ತಿರಲಿಲ್ಲ, ನಾವು ಹೇಳತಕ್ಕಂಥ ಪ್ರಶ್ನೆಯು ಇರುತ್ತಿರಲಿಲ್ಲ ಮತ್ತು ಇವತ್ತು ಚರ್ಚೆ ಮಾಡತಕ್ಕಂಥ ಅವಶ್ಯಕತೆ ಕೂಡ ಇರುತ್ತಿರಲಿಲ್ಲ. ಹೋದವರ್ಷ 4.5 ಕೋಟಿ ರೂಪಾಯಿ ಹಣ ಕೊಟ್ಟು ಇದರಲ್ಲಿ ಅರ್ಧ ಹಣವನ್ನು ಇನ್ನು ಬಿಡುಗಡೆ ಮಾಡಿಲ್ಲ. ಇವತ್ತು ನಾವು ಕೊಟ್ಟಿರತಕ್ಕಂಥ ಕಾಮಗಾರಿಗಳ ಎಸ್ಟಿಮೇಟ್‌ಗಳೆಲ್ಲಾ ಅವರ ಹತ್ತಿರವೇ ಇದೆ, ಈಗ ಅವರು ಹಣ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಎರಡನೇಯದಾಗಿ ಇವತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಸೇರತಕ್ಕಂಥ 72 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಲುವೆ, ಕುಂಟೆ, ಕರೆ, ಹೀಗೆ ಎಲ್ಲಾ ಕಡೆ ಸಣ್ಣ ನೀರಾವರಿಗೆ ಅವಲಂಬಿತವಾಗಿರತಕ್ಕಂಥ ಪ್ರದೇಶಗಳಾಗಿವೆ. ಆದುದರಿಂದ, ತಾವು ಸಣ್ಣ ನೀರಾವರಿಗೂ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ. ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರತಕ್ಕಂಥ 72 ವಿಧಾನಸಭೆಯ ಕ್ಷೇತ್ರಗಳು ಏನು ಇವೆ, ಇಡೀ 72 ವಿಧಾನಸಭೆಯ ಕ್ಷೇತ್ರಗಳು ಅತೀ ಹೆಚ್ಚಿಗೆ ಆಧಾರ ಬಿದ್ದಿರತಕ್ಕಂಥದ್ದು ಈ ಸಣ್ಣ ನೀರಾವರಿ ಪ್ರದೇಶಗಳಿಗೆ. ಕೆರೆ, ಕಾಲುವೆ, ಕುಂಟೆ ಇವು ಸಣ್ಣ ನೀರಾವರಿ ಇರತಕ್ಕಂಥ ಪ್ರದೇಶಗಳು. ನಾನು ಮೊನ್ನೆ ಬಜೆಟ್ ಮೇಲೆ ಮಾತನಾಡುವಾಗ ಕೂಡ ಹೇಳಿದ್ದೇನೆ. 64 ಪರ್ಸೆಂಟ್ ಕೃಷಿ ಇವತ್ತು ಸಣ್ಣ ನೀರಾವರಿ ಮೇಲೆ ಆಧಾರ ಬಿದ್ದಿದೆ. 64 ಪರ್ಸೆಂಟ್ ಕೃಷಿ ಪ್ರದೇಶವನ್ನು ನೀವು ನಿರ್ಲಕ್ಷ್ಯ ಮಾಡಿ ಹೇಗೆ ಅಭಿವೃದ್ಧಿಯನ್ನು ಸಾಧನೆ ಮಾಡುತ್ತೀರಿ ಎನ್ನತಕ್ಕಂಥದ್ದು ದಯಮಾಡಿ ನೀವು ಆಲೋಚನೆಯನ್ನು ಮಾಡಿ. ಈ ಸಣ್ಣ ನೀರಾವರಿ ನಮಗೆ ಏನು ಇವೆ. ಈ ಸಣ್ಣ ನೀರಾವರಿ ಇಲಾಖೆಯ ಪರಿಸ್ಥಿತಿ ಏನಾಗಿದೆ, ಅದಕ್ಕೆ ತಾವು ಸಾಕಷ್ಟು ಹಣವನ್ನೂ ಕೊಡುತ್ತಿಲ್ಲ. ಕೆರೆ, ಕಟ್ಟೆ ರಿಪೇರಿಗೆ ಹಣ ಇಲ್ಲ. ಕಾಲುವೆ ರಿಪೇರಿಗೆ ಕಾಸು ಇಲ್ಲ. ತೂಬು ರಿಪೇರಿಗೆ ಕಾಸು ಇಲ್ಲ. ಕೊನೆಗೆ ಮಾನ್ಯ ಬೈರೇಗೌಡರು ಏನೇನೋ ಪ್ರಯತ್ನ ಮಾಡಿ ಕೆರೆಯಲ್ಲಿರುವ ಹೂಳನ್ನು ತೆಗೆಸುವ ಕಾರ್ಯಕ್ರಮ ಮಾಡೋಣ ಎಂದರು, ಅದು ನಿಜವಾಗಿಯೂ ಕೂಡ ಒಳ್ಳೆಯದು. ಅವರ ಸಾಹಸಕ್ಕೆ ನಾವು ಶ್ಲಾಘನೆ ಮಾಡಬೇಕು. ಬೈರೇಗೌಡರು ಅವರ ಮೇಲೆ ಇವರ ಮೇಲೆ ಬಿದ್ದು ಒಂದೆರಡು ಕಡೆ ಪ್ರಾರಂಭ ಮಾಡಿಸಿದರು. ಅದಕ್ಕೆ ಒಳ್ಳೆಯ ರೆಸ್ಪಾನ್ಸಿಬಲ್ ಬಂತು. ಜನರಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಅದು ಅಷ್ಟಕ್ಕೆ ನಿಂತು ಬಿಟ್ಟಿತು. ಆ ಕೆರೆಗಳಲ್ಲಿರುವ ಹೂಳನ್ನು ತೆಗೆಯತಕ್ಕಂಥದ್ದರಿಂದ ಪ್ರಾರಂಭವಾಗಿ ಕಾಲುವೆ, ಕುಂಟೆಗಳನ್ನು ರಿಪೇರಿ ಮಾಡಿಸುವವರೆಗೂ ಕೂಡ ಸಣ್ಣ ನೀರಾವರಿಗೆ ಹಣ ಇಲ್ಲ. ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಹಣವನ್ನು ಕೊಟ್ಟರೆ ಕೆರೆ, ಕಾಲುವೆಗಳನ್ನು ರಿಪೇರಿ ಮಾಡಿಸಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಅಂತರ್ಜಲ ಸಂಪೂರ್ಣವಾಗಿ ಕೆಳಗಡೆ ಹೋಗುತ್ತಿದೆ. ಅದನ್ನು ಅಭಿವೃದ್ಧಿ ಪಡಿಸತಕ್ಕಂಥ ವ್ಯವಸ್ಥೆ ಇಲ್ಲ. ಆ ರೀತಿಯಾದಂಥ ಪರಿಸ್ಥಿತಿಯಲ್ಲಿ ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) :— ನಾನು ಭಾಷಣವನ್ನು ಮಾಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಆದರೆ, ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ನನಗೆ ನೆನಪು ಇದ್ದ ಪ್ರಕಾರ, ಕೆಲಸ ವಿಚಾರಗಳು ನಮ್ಮ ತಲೆಯಲ್ಲಿ ಇದ್ದವು. ಏಕೆಂದರೆ, ಅದನ್ನು ಬರೀ ಸ್ಟೇಟ್‌ನಿಂದ ತಾವು ಪ್ರತ್ಯೇಕವಾಗಿ ಕೊಡತಕ್ಕಂಥ ಹಣ ಒಂದು ಕಡೆಯಾದರೆ ಹಿಂದೆ ನನಗೆ ನೆನಪು ಇದ್ದ ಪ್ರಕಾರ I was just trying to clarify. 42 ತಾಲ್ಲೂಕುಗಳು ಹಿಂದೆ ಡಿಪಿಎಪಿ ತಾಲ್ಲೂಕುಗಳಾಗಿದ್ದವು. ಅದರಲ್ಲಿ ಕೂಡ ಡಿಪಿಎಪಿ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ. ಇನ್ನು ಕೆಲವು ಕಡೆ ಉದಾಹರಣೆಗೆ ಕೋಲಾರ ಹಾಗೂ ಇತರೆ ಕಡೆಗಳಲ್ಲಿ ರೋಜ್‌ಗಾರ್ ಯೋಜನೆ ಎನ್‌ಆರ್‌ಇಪಿ ಕಾರ್ಯಕ್ರಮದಲ್ಲಿ ಇದನ್ನೆಲ್ಲ ಕೋ-ಆರ್ಡಿನೇಟ್ ಮಾಡಿ ಕೇಂದ್ರ ಸರ್ಕಾರದಿಂದ ಕೆಲವು ಯೋಜನೆಗಳ ಬಗ್ಗೆ ನಾವು ಅನೇಕ ಬಾರಿ ಪ್ಲಾನಿಂಗ್ ಕಮೀಷನ್ ಅಥವಾ ಬೇರೆ ಬೇರೆ ಇಲಾಖೆಗಳ ಜೊತೆಯಲ್ಲಿ ಚರ್ಚೆಗೆ ಹೋದಾಗ, ನಮಗೆ ಅನ್ನಿಸುತ್ತಿತ್ತು, ಅನೇಕ ಯೋಜನೆಗಳಿಗೆ ರಾಜ್ಯ ಸರ್ಕಾರಗಳು ಕೆಲವು ಸಾರಿ ಸರಿಯಾದಂಥ ಪ್ರಾಜೆಕ್ಟ್‌ಗಳನ್ನು ಮಾಡಿದರೂ ಸಹ ಅಲ್ಲಿರುವ ಹಣ ಕೂಡ ಸರಿಯಾಗಿ ಇಲ್ಲಿಗೆ ಬರುತ್ತಿರಲಿಲ್ಲ. ಇದೆಲ್ಲಾ ಆಲೋಚನೆಯನ್ನು ನಾವು ಮಾಡಿಕೊಂಡು ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ರಚನೆ ಮಾಡಿದ್ದುದು. ತಾವು ಬಜೆಟ್ ನಿಂದ ಕೊಡತಕ್ಕಂಥದ್ದು ಒಂದು ಕಡೆ, ಅದಕ್ಕೆ ಪೂರಕವಾಗಿ ಇಂತಹ ಕೆಲವು ಯೋಜನೆಗಳನ್ನು ತಾವು ದಯಮಾಡಿ, ನಿಮ್ಮ ಪ್ರಾಜೆಕ್ಟ್‌ಗಳನ್ನು ಮಾಡಿ ಕೇಂದ್ರ ಸರ್ಕಾರದ ಕೆಲವು ಯೋಜನೆಗಳನ್ನು ತರಬೇಕು. ಆ ಯೋಜನೆಗಳು ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತವೆ. ಆದರೆ ಅವು ನಮ್ಮ ರಾಜ್ಯಕ್ಕೆ ಬರುವುದಿಲ್ಲ. ತಾವು ದಯಮಾಡಿ ಇದಕ್ಕೆ ಒಬ್ಬ ಒಳ್ಳೆಯ ಡೈನಾಮಿಕ್ ಅಧಿಕಾರಿಯನ್ನು ಹಾಕಬೇಕು. ಏಕೆಂದರೆ ಇದು ಸಣ್ಣ ಕಾರ್ಯಕ್ರಮ ಅಲ್ಲ. ಇದನ್ನು ಬಹಳ ಚೆನ್ನಾಗಿ ಮಾಡಬೇಕು. ಇದಕ್ಕೆ ಒಬ್ಬ ಡೈನಾಮಿಕ್ ಅಧಿಕಾರಿಯನ್ನು ಹಾಕಿ, ಅವನೇ ಸ್ಪೆಷಲ್ ಆಫೀಸರ್ ಆಗಿ, ಅವನು ಡೆಲ್ಲಿಗೆ ಹಾಗೂ ಬೇರೆ ಬೇರೆ ಇಲಾಖೆಯ ಸೆಕ್ರೆಟರಿಗಳ ಜೊತೆಗೆ ಕುಳಿತುಕೊಂಡು ಇಲ್ಲಿ ಕೂಡ ಡಿಪಿಎಪಿ ಕಾರ್ಯಕ್ರಮಗಳು ಯಶಸ್ವಿಯಾಗಿ ಆಗಲಿಕ್ಕೆ How can you integrate so may other programmes. ಇದನ್ನೆಲ್ಲಾ ಮಾಡಿದರೆ, ಬಯಲುಸೀಮೆ ಅಭಿವೃದ್ಧಿ ಮಂಡಳಿ what can be ideal boards in the State. ಆದರೆ ಬರೀ ರಾಜ್ಯ ಸರ್ಕಾರದ ಹಣವನ್ನು ನಂಬಿಕೊಂಡು ಇದ್ದರೆ ಅದು ಸಾಧ್ಯವಾಗುವುದಿಲ್ಲ. ಸ್ಟೇಟ್ ಗೌರ್‍ನಮೆಂಟ್ ಹೇಳತಕ್ಕಂಥ ಕಾರ್ಯಕ್ರಮಗಳನ್ನು ಇಂಟಿಗ್ರೇಟ್ ಮಾಡಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವನ್ನು ಇಂಟಿಗ್ರೇಟ್ ಮಾಡಬೇಕು. ನಬಾರ್ಡ್‌ಗೆ ನೀವು ಇನ್ನು ಕೆಲವು ಕಾರ್ಯಕ್ರಮಗಳನ್ನು ಕೊಟ್ಟರೆ, ಇದನ್ನು ಒಂದು ಉಪಯುಕ್ತವಾದಂಥ ಮತ್ತು ಬೃಹತ್ ಆದಂಥ ಒಂದು ಸಂಸ್ಥೆಯನ್ನಾಗಿ ಕಟ್ಟಲಿಕ್ಕೆ ಸಾಧ್ಯವಿದೆ. ನಾವು ಈ ಎಲ್ಲಾ ಆಲೋಚನೆಗಳನ್ನು ಮಾಡಿಕೊಂಡು ನಾವು ಆಗ ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿದ್ದು ಆದ್ದರಿಂದ ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅಧ್ಯಕ್ಷರೆ, ಹಾಗಾಗಿ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನಾವು ಬಯಲುಸೀಮೆ ಅಭಿವೃದ್ಧಿ ಮಂಡಲಿಯ ಏರಿಯಾದಲ್ಲಿ ಬರುವ ಸದಸ್ಯರು. ಇದು ಜನರಿಗೂ ಗೊತ್ತಾಗಿದೆ. ಬಯಲುಸೀಮೆ ಅಭಿವೃದ್ಧಿ ಮಂಡಲಿ ಇದೆ, ಆದರಿಂದ ಶಾಸಕರಿಗೆ ಅವರ ಕ್ಷೇತ್ರಕ್ಕೆ ಹಣವನ್ನು ಕೊಡುತ್ತಾರೆಂದು, ಪ್ರತಿಯೊಬ್ಬರೂ ನಮಗೆ, ನಿಮಗೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಿಂದ ಹಣ ಬರುತ್ತದೆ. ನಾವು ಟಿ.ಪಿ.ಎಸ್. ಸದಸ್ಯರನ್ನು ಕೇಳಿದರೆ, ಅವರು ನಿಮಗೆ ಬಯಲುಸೀಮೆ ಮಂಡಲಿಯಿಂದ ಹಣ ಬರುತ್ತದೆಂದು ಎನ್ನುತ್ತಾರೆ. ಜಿಲ್ಲಾ ಪಂಚಾಯಿತಿಯಲ್ಲಿ ಕೇಳಿದರೆ, ನಿಮಗೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಿಂದ ಹಣ ಬರುತ್ತದೆಂದು ಹೇಳುತ್ತಾರೆ. ಈ ವಿಷಯ ಎಲ್ಲರಗೂ ಗೊತ್ತಾಗಿದೆ. ಆದರೆ ವಾಸ್ತವವಾಗಿ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಇವತ್ತು ಹಣ ಬರುತ್ತಿಲ್ಲ ಹಾಗಾಗಿ ಸರ್ಕಾರ ಒಂದನ್ನು ತೀರ್ಮಾನ ಮಾಡಬೇಕು. ನಾವು ಬಯಲುಸೀಮೆ ಅಬಿವೃದ್ಧಿ ಮಂಡಲಿಗೆ ಹೆಚ್ಚಿಗೆ ಹಣವನ್ನು ಕೊಡುತ್ತೇವೆ, ಇವತ್ತಿನಿಂದ ಆ ಹಣವನ್ನು ತೆಗೆದುಕೊಂಡು ಕೆಲಸವನ್ನು ಮಾಡಿ ಎಂದಾದರೂ ತೀರ್ಮಾನ ಮಾಡಿ, ಬೇಡವೆಂದರೆ ಆ ಬೋರ್ಡನ್ನು ವೈಂಡ್‌ಅಫ್ ಮಾಡಿಬಿಡಿ. ಅದು ಇದ್ದರೆ ಏನಾಗುತ್ತದೆಂದರೆ: ನಾವು ಜಿಲ್ಲಾ ಪಂಚಾಯಿತಿಯಲ್ಲಿ ಹೋಗಿ ಕೇಳಿದರೆ, ಅವರು ಹೇಳುತ್ತಾರೆ: ಏನ್ ಸಾರ್ ನಿಮಗೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯಿಂದ ಹಾಗೂ ಡಿಆರ್‌ಡಿಪಿಯಲ್ಲಿ ಹಣ ಬರುತ್ತದೆಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಮೂರು ಕಾಸು ಹಣ ಕೂಡ ಬರುವುದಿಲ್ಲ. ಶ್ರೀ ಸಿದ್ಧರಾಮಯ್ಯನವರೆ, ನಾವು ನಿಮಗೆ ಏನು ಮಾಡಬೇಕು. ನಿಮಗೆ ನಾವು ದಮ್ಮಯ್ಯ ಹಾಕಿದ್ದೇವೆ, ಬೇಡಿಕೊಂಡಿದ್ದೇವೆ. ಧರಣಿ ಮಾಡಿದ್ದೇವೆ. ಇಲ್ಲಿ ಗಲಾಟೆಯನ್ನು ಮಾಡಿರುತ್ತೇವೆ. ಹಾಗೂ ಸಭಾತ್ಯಾಗವನ್ನು ಮಾಡಿದ್ದೇವೆ. ನಾವು ಇಷ್ಟೆಲ್ಲಾ ಮಾಡಿದರೂ ಕೂಡ ಆಗಲಿಲ್ಲವೆಂದರೆ ಇನ್ನು ನಮಗೆ ಬೇರೆ ದಾರಿ ಏನು ಇದೆ. ನೀವು ಆಶ್ವಾಸನೆಯನ್ನು ಕೊಟ್ಟಿಲ್ಲವೆಂದು ಹೇಳುತ್ತೀರಿ. ನೀವು ಪ್ರಾಮಾಣಿಕವಾಗಿ ಹೇಳಿ, ನಮಗೆ ನಿಮ್ಮ ಮೇಲೆ ನಂಬಿಕೆ ಇದೆ, ನೀವು ಸುಳ್ಳು ಹೇಳುವುದಿಲ್ಲ. ನೀವು ಚರ್ಚೆ ಮಾಡಿದಂಥ ಸಂದರ್ಭದಲ್ಲಿ ನೀವು ಹೆಚ್ಚಿಗೆ ಹಣವನ್ನು ಕೊಡುತ್ತೇನೆಂದು ಹೇಳಿದಿರಿ. ಖಂಡಿತವಾಗಿ ಹೆಚ್ಚಿಗೆ ಕೊಡುತ್ತೇನೆಂದು ಹೇಳಿರುತ್ತೀರಿ. ಎಷ್ಟು ಹಣ ಕೊಡುತ್ತೇನೆಂದು ಹೇಳಿರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಪ್ರಯತ್ನ ಮಾಡುತ್ತೇನೆಂದರೆ ಕೊಡುತ್ತೇನೆಂದು ಅಲ್ಲವೇ? ಕೊಡುವುದಿಲ್ಲವೆನ್ನುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಎನ್ನುತ್ತೀರಾ? ಹಾಗಾದರೆ ಅದಕ್ಕೂ ನಾವು ಇದನ್ನೇ ಹೇಳುತ್ತೇವೆಂದು ತಾವು ಹೇಳಿಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ನನಗೆ ಪ್ರಮುಖವಾಗಿ ಬೇಕು.

ಶ್ರೀ ಎಂ.ಪಿ. ಪ್ರಕಾಶ್ :— ನೀವು ನಿಮ್ಮ ಮಾತಿನಲ್ಲಿ ಬದಲಾವಣೆಯನ್ನುಮಾಡಿದಿರಿ. ಆದರೆ ಅದು ಏಕೋ ಏನೋ ಸರಿ ಹೋಗಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ದಯಮಾಡಿ ತಾವಾದರೂ ಹೇಳಿಕೊಡಿ, ನಾವು ಯಾವ ರೀತಿಯಾಗಿ ಅರಿಕೆ ಮಾಡಿಕೊಳ್ಳಬೇಕು. ಮಾನ್ಯ ಪ್ರಕಾಶ್‌ರವರು ಹೇಳುತ್ತಿದ್ದಾರೆ. ಆದ್ದರಿಂದ, ನಮಗೆ ಸಣ್ಣ ನೀರಾವರಿಗಳ ಕೆಲಸಗಳು ಅಲ್ಲಿ ಆಗಬೇಕು. ಸಣ್ಣ ನೀರಾವರಿಗಳ

ಕೆಲಸಗಳು ಅಲ್ಲಿ ಆಗಬೇಕು. ಸಣ್ಣ ನೀರಾವರಿ ಯೋಜನೆಗಳು ಬಹಳ ಮುಖ್ಯವಾದವು. ಕೆರೆಯಲ್ಲಿ ಹೂಳು ತೆಗೆಯತಕ್ಕಂಥದ್ದಕ್ಕೆ ಕಟ್ಟೆ ರಿಪೇರಿ ಮಾಡತಕ್ಕಂಥದ್ದಕ್ಕೆ, ಕಾಲುವೆ ಮಾಡುವುದಕ್ಕೆ ಇದು ಬಹಳ ಮುಖ್ಯವಾಗಿ ಆಗಬೇಕು. ಅಂತರ್ಜಲವನ್ನು ಹೆಚ್ಚಿಸಲಿಕ್ಕೆ ಹೆಚ್ಚು ಕಾರ್ಯಕ್ರಮವನ್ನು ಹಾಕಬೇಕಾಗುತ್ತದೆ. ಚೆಕ್ ಡ್ಯಾಮ್‌ಗಳನ್ನು ನಿರ್ಮಾಣ ಮಾಡತಕ್ಕಂಥದ್ದು, ನೀರನ್ನು ಶೇಖರಣೆ ಮಾಡತಕ್ಕಂಥದಕ್ಕೆ ಹಣ ಬೇಕಾಗಿದೆ. ಎ.ಪಿ.ಎಂ.ಸಿ.ಯವರು ಕೂಡ ಹಣವನ್ನು ಕೊಡುತ್ತೇವೆಂದು ಹೇಳಿದರು. ಮೊದಲು ಒಂದು ಪಿರಿಯಡ್ ಕೊಟ್ಟರು. ಅವರು ಹಣವನ್ನು ಕೊಡಲಿಕ್ಕೆ ಸುಸ್ತಾದರು. ಅವರ ಕಡೆ ಕೂಡ ಹಣ ಇಲ್ಲದ ಸ್ಥಿತಿ. ಅದರಲ್ಲಿ ಹಣ ಕೂಡ ಈಗ ಇಲ್ಲ. 75 ವಿಧಾನಸಭೆಯ ಕ್ಷೇತ್ರಗಳು ಇವೆಲ್ಲಾ ಸಂಪೂರ್ಣವಾಗಿ ಎಲ್ಲಾ ರೀತಿಯಿಂದಲೂ ಹಿಂದುಳಿದಿರತಕ್ಕಂಥ ಪ್ರದೇಶಗಳು. ಮಾನ್ಯ ಸಿದ್ಧರಾಮಯ್ಯನವರೇ, ನೀವು ಆಲೋಚನೆ ಮಾಡಬೇಕು. ಮಲೆನಾಡು ಅಭಿವೃದ್ಧಿ ಮಂಡಲಿಗೆ ಎಷ್ಟು ವಿಧಾನಸಭೆಯ ಕ್ಷೇತ್ರಗಳು ಬರುತ್ತವೆ. ಹೈದ್ರಾಬಾದ್-ಕರ್ನಾಟಕಕ್ಕೆ ಎಷ್ಟು ವಿಧಾನಸಭೆಯ ಕ್ಷೇತ್ರಗಳು ಬರುತ್ತವೆ. ನಮಗೆ ಎಷ್ಟು ವಿಧಾನಸಭೆಯ ಕ್ಷೇತ್ರಗಳು ಬರುತ್ತವೆ. ನೀವು ಅವರಿಗೆ ಕೊಡಬೇಡಿ ಎಂದು ಖಂಡಿತವಾಗಿ ಹೇಳುತ್ತಿಲ್ಲ, ನೀವು ಕೊಡಿ. ಅವರಿಗೆ ಎಷ್ಟು ಸಾಧ್ಯತೆ ಇದೆ ಅದಕ್ಕಿಂತಲೂ ಹೆಚ್ಚಿಗೆ ಕೊಡಿ, ನಾವು ಏನು ಬೇಡವೆನ್ನುವುದಿಲ್ಲ. ನಮ್ಮ ಪ್ರದೇಶ ಎಷ್ಟು ಇದೆ, ನಮಗೆ ಕೊಡುವ ಹಣ ಎಷ್ಟು ಇದೆ, ಇದರ ಬಗ್ಗೆ ತಾವು ಆಲೋಚನೆ ಮಾಡಿ. ನೀವು ಹಣವನ್ನು ಕೊಡದೇ ಬೋರ್ಡ್ ಎನ್ನತಕ್ಕಂಥದ್ದು ಅದು ಏಕೆ ಇರಬೇಕು? ಆಗಲೇ ಮಾಧುಸ್ವಾಮಿಯವರು ಹೇಳಿದರು ಅದರ ಸ್ಥಿತಿ ಈಗ ಏನಾಗಿದೆ ಎಂದು ಪೂರ್ಣಕಾಲದ ಕಾರ್ಯದರ್ಶಿಯವರು ಆ ಬೋರ್ಡಿಗೆ ಇಲ್ಲ. ಅದನ್ನು ಯಾರು ಅಲ್ಲಿ ನೋಡುವವರೇ ಇಲ್ಲ. ಅಲ್ಲಿರತಕ್ಕಂಥ ಹಣ ಸರಿಯಾದ ರೀತಿಯಲ್ಲಿ ಸರಿಯಾದ ಸಮಯಕ್ಕೆ ಉಪಯೋಗ ಆಗಬೇಕೆಂದು ಹೇಳಿದರೆ, ಆ ಎಸ್ಟಿಮೇಟ್ ಅಲ್ಲಿಗೆ ಹೋದರೆ, ಅದನ್ನು ಸಹಿ ಮಾಡುವವರು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು, ಆ ಜಿಲ್ಲಾಧಿಕಾರಿಗಳು ಇದಕ್ಕೆ ಇನ್‌ಚಾರ್ಜ್. ಆ ಜಿಲ್ಲಾಧಿಕಾರಿಗಳಿಗೆ ಸಮಯ ಇರುವುದಿಲ್ಲ. ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡತಕ್ಕಂಥವರು, ಅವರಿಗೆ ಈ ಕೆಲಸ ಮಾಡಲಿಕ್ಕೆ ಸಮಯ ಎಲ್ಲಿದೆ? 3, 5, 6 ತಿಂಗಳವರೆಗೆ ಆ ಫೈಲ್‌ಗಳು ಅಲ್ಲಿಯೇ ಬಿದ್ದಿರುತ್ತವೆ. ಇಷ್ಟು ಅವ್ಯವಸ್ಥಿತವಾದಂಥ ರೀತಿಯಲ್ಲಿ ಇಷ್ಟು ನಿರ್ಲಕ್ಷ್ಯಕ್ಕೆ ಒಳಪಟ್ಟರೆ ಆ ಒಂದು ಬೋರ್ಡನ್ನಾದರೂ ನಾವು ಏಕೆ ಇಟ್ಟುಕೊಳ್ಳಬೇಕು? ದಯವಿಟ್ಟು ಆಲೋಚನೆ ಮಾಡಿ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ನಾವು ನಿಮ್ಮನ್ನು ಇಷ್ಟೇ ಕೇಳುವುದು, ಏಕೆಂದರೆ ನಿಮಗೆ ಗೊತ್ತಿರದೇ ಇಲ್ಲ. ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಕನಿಷ್ಠ 25 ಕೋಟಿ ರೂಪಾಯಿಗಳನ್ನಾದರೂ ನೀವು ಪ್ರತಿವರ್ಷ ಕೊಡಬೇಕು. ಇದು ನಮ್ಮ ಸತತವಾದಂಥ ಒತ್ತಾಯ. ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಆಶ್ವಾಸನೆ ಕೊಟ್ಟಿದ್ದರು ಮಾನ್ಯ ಪಟೇಲರೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನೀವೂ ಕೂಡ ಹೆಚ್ಚಿಗೆ ಕೊಡುತ್ತೇನೆಂದು ಹೇಳಿರುತ್ತೀರಿ. ಆದರೆ ನೀವು 25 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿರುವುದಿಲ್ಲ. ಹೆಚ್ಚಿಗೆ ಕೊಡೋಣ ಎಂದು ಹೇಳಿರುತ್ತೀರಿ. ಹೆಚ್ಚಿಗೆ ಕೊಡಲು ನೀವು ಒಪ್ಪಿದ್ದೀರಿ. ಹಾಗಾಗಿ ನಮಗೆ ನೀವು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಹೆಚ್ಚಿನ ಹಣವನ್ನು ಕೊಡಲೇ ಬೇಕು. ಅದರ ತೀರ್ಮಾನ ಇವತ್ತು ಆಗಬೇಕು. ಇಲ್ಲವಾದರೆ ನೀವು ಆ ಮಂಡಲಿಯನ್ನು

ರದ್ದು ಮಾಡುತ್ತೇವೆ ಎನ್ನುವ ತೀರ್ಮಾನವನ್ನಾದರೂ ಇವತ್ತು ಹೇಳಿಬಿಡಿ. ಇಲ್ಲವೆಂದರೆ ನಾವೆಲ್ಲರೂ ಇಲ್ಲಿ ಬಂದು ಧರಣಿಗೆ ಕುಳಿತುಕೊಳ್ಳುತ್ತೇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಮಾಧುಸ್ವಾಮಿಯವರು ಹಾಗೂ ಶ್ರೀರಾಮರೆಡ್ಡಿಯವರು ಮಾತನಾಡಿದ್ದಾರೆ. ಮಾತನಾಡಿರತಕ್ಕಂಥ ವಿಷಯದ ಬಗ್ಗೆ ಮತ್ತೆ ಮಾತನಾಡಿ ಹೇಳುವುದು ಅಷ್ಟು ಚೆನ್ನಾಗಿ ಇರುವುದಿಲ್ಲ. ಆದರೆ ಇವತ್ತು ನಮ್ಮ ಸರ್ಕಾರ ಮೊದಲನೆಯದಾಗಿ ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ತಂದು, ಅದಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡಬೇಕೆಂದು ಹೇಳಿದ್ದು, ಅದು ನಮ್ಮ ಕಾಲದಲ್ಲಿಯೇ. ಆದರಲ್ಲಿ ಮಾನ್ಯ ಬೈರೇಗೌಡರು ಇಲ್ಲಿ ಕೃಷಿ ಮಂತ್ರಿಗಳಾಗಿ ಮತ್ತು ಈ ಭಾಗದ ಒಬ್ಬ ಸದಸ್ಯರಾಗಿ ಕೆಲಸ ಮಾಡತಕ್ಕಂಥ ಈ ಸಂದರ್ಭದಲ್ಲಿ ಅವರು ಸಹಿತ ಬಹಳ ಪ್ರೀತಿಯಿಂದ ಈ ಕಾರ್ಯಕ್ರಮ ಆಗಬೇಕು. ಅದು ಅನುಷ್ಠಾನಗೊಳ್ಳಬೇಕು ಮತ್ತು ಅದಕ್ಕೆ ಹೆಚ್ಚಿಗೆ ಹಣವನ್ನು ಕೊಟ್ಟು ಈ ಭಾಗದ ಎಲ್ಲಾ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ಅಭಿವೃದ್ಧಿಗೊಳಿಬೇಕೆಂದು ಅವರೂ ಸಹಿತ ಇಷ್ಟಪಟ್ಟಿರುವಂಥವರು ಆಗ ಒಂದು ಹೋರಾಟವನ್ನು ಮಾಡಿದರು. ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಆಗ ಅವರು ಮನೆಯಲ್ಲಿಯೇ ಕರೆಸಿ ಬಹಳ ವಿಶ್ವಾಸದಿಂದ ಹೇಳಿದರು. ಈ ಸಮಯದಲ್ಲಿ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಸುತ್ತೇನೆಂದು ಅವರು ಮಾತು ಕೊಟ್ಟರು. ಆದರೆ ಅದೂ ಸಹಿತ ಈಡೇರಲಿಲ್ಲ. ಅದು ಆದ ಮೇಲೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಪಟೇಲರೂ ಕೂಡ ಆಶ್ವಾಸನೆಯನ್ನು ಕೊಟ್ಟರು. ಆದರೆ ನಮಗೆ ಒಂದು ದುರಾದೃಷ್ಟವಶಾತ್ ಏನಾಯಿತೆಂದರೆ ನಾವು ಅದರ ಬಗ್ಗೆ ಇಲ್ಲಿ ಹೇಳಬೇಕಗುತ್ತದೆ. ಈ ಭಾಗದಲ್ಲಿ ನಮಗೆ ಯಾವುದೇ ರೀತಿಯ ನೀರಾವರಿ ಸೌಲಭ್ಯ ಇರುವುದಿಲ್ಲ. ಇವತ್ತು ಅನೇಕ ಸೌಲಭ್ಯವನ್ನು ಬೇರೆಬೇರೆ ಮಂಡಲಿಗೆ ಬೇರೆ ಬೇರೆ ರೂಪದಲ್ಲಿ ಹಣಕಾಸಿನ ಸೌಲಭ್ಯವನ್ನು ತಾವು

4.20 ಪಿ.ಎಂ.

ಮಾಡಿಕೊಟ್ಟಿರುತ್ತೀರಿ. ಮಾನ್ಯ ಕೃಷಿ ಸಚಿವರು ಈ ವಿಷಯದ ಬಗ್ಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಸುಮಾರು 5 ವರ್ಷಗಳಿಂದ ನಮಗೆ ಯಾವುದೇ ಸೌಲಭ್ಯಗಳನ್ನು ಹಾಗೂ ಈ ಒಂದು ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿರುವುದಿಲ್ಲ. ಕೆರೆಗಳಲ್ಲಿ ಹೂಳೆತ್ತುವುದರ ಮುಖಾಂತರ ನಾವು ಅಂತರ್ ಜಲವನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಇಲ್ಲಿರತಕ್ಕ ಮುಖ್ಯವಾದ ಅಂಶಗಳಲ್ಲಿ ಒಂದು. ಅದಕ್ಕೆ ನಾವು ಹೆಚ್ಚಿನ ಶಕ್ತಿಯನ್ನು ಕೊಡುತ್ತಿಲ್ಲ. ಏಕೆಂದರೆ ನಮಗೆ ಬೇರೆ ಸೌಲಭ್ಯಗಳು ಇಲ್ಲ. ಮುಂದೆ ಇದೇ ರೀತಿ ಹತ್ತಾರುವರ್ಷಗಳು ಹೋದರೆ ನೀರಿನ ಬಾಟಲಿಯನ್ನು ಇಟ್ಟುಕೊಂಡುಹೋಗುವ ಕಾರ್ಯಕ್ರಮವನ್ನೂ ಸಹ ನಾವು ಹಾಕಿಕೊಳ್ಳಬೇಕಾಗುತ್ತದೆ. ಅಂತಹ ಒಂದು ಪರಿಸ್ಥಿತಿ ಈ ಭಾಗಗಳಲ್ಲಿ ಬರುತ್ತದೆ ಎನ್ನುವ ಭಾವನೆ ನಮಗೆಲ್ಲರಿಗೂ ಬಂದಿದೆ. ಇಲ್ಲಿ ಅನೇಕ ಸ್ನೇಹಿತರು ಹೇಳುತ್ತಿದ್ದರು. ನಾವೆಲ್ಲರೂ ಹೆಚ್ಚಿಗೆ ಶಕ್ತಿಯನ್ನು ಕೊಡಬೇಕು. ಇದಕ್ಕೆ ಸರ್ಕಾರದ

ಮೇಲೆ ಒತ್ತಡವನ್ನು ತಂದು ನಾವು ಈ ಕಾರ್ಯಕ್ರಮವನ್ನು ರೂಪಿಸಬೇಕೆಂದು ಹೇಳುತ್ತಿದ್ದರು. ಮಾನ್ಯ ಹಣಕಾಸಿನ ಸಚಿವರಾದ ಶ್ರೀ ಸಿದ್ಧರಾಮಯ್ಯನವರು ರೈತಕುಟುಂಬದಿಂದ ಬಂದವರಾಗಿದ್ದು ಇವತ್ತು ಅನೇಕ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ಸದನದಲ್ಲಿ ಬಹುಶಃ ಭಾಷಣವನ್ನು ಮಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಮ್ಮ ಹಿಂದಿನ ಅಳಿಲನ್ನು ನಾವು ಅವರ ಜೊತೆ ತೋಡಿಕೊಂಡಿದ್ದೇವೆ. ನಮ್ಮ ತಾಲ್ಲೂಕಿನವರಾದ ಶ್ರೀ ಕೃಷ್ಣಮೂರ್ತಿಯವರು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ನಬಾರ್ಡ್ ಕೆಲಸಗಳು, ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕೆಲಸಗಳು ಎಲ್ಲಾ ಕಡೆಗಳಲ್ಲೂ ಆಗಿದೆ. ಆದರೆ ಬಯಲುಸೀಮೆ ಅಭಿವೃದ್ಧಿ ಮಂಡಲಿಯ ಕೆಲಸಗಳು ಆಗಿದೆ ಎಂದು ಎಲ್ಲೂ ಕೂಡ ನೋಡುವುದಕ್ಕೆ ಸಾಧ್ಯವಿಲ್ಲ ಎಂದು ಮಂಡಳಿಯ ಅಧ್ಯಕ್ಷರು ಹೇಳಿದರು. ಇಂತಹ ಒಂದು ಪರಿಸ್ಥಿತಿಯನ್ನು ನಾವು ಬೇರೆ ಬೇರೆ ಜಿಲ್ಲೆಗಳಲ್ಲಿ ಇವತ್ತು ಕಾಣುತ್ತಿದ್ದೇವೆ. ಇಷ್ಟೊಂದು ದೊಡ್ಡದಾದ 8 ಜಿಲ್ಲೆಗಳನ್ನು ಒಳಗೊಂಡು 75 ಜನ ಶಾಸಕರುಗಳಿದ್ದು ನಾವು ಈ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ಕೊಡಲಿಲ್ಲವೆಂದರೆ ಬಹುಶಃ ಜನತಾದಳದ ಸರ್ಕಾರದಲ್ಲಿ ಹೆಚ್ಚು ಜನ ರೈತರುಗಳಾದ ಶಾಸಕರುಗಳಿದ್ದು, ಆ ಸರ್ಕಾರವೇ ಹೆಚ್ಚಿನ ಒತ್ತನ್ನು ಕೊಟ್ಟಿಲ್ಲವೆಂದು ಮಾತು ದಯಮಾಡಿ ಯಾರಲ್ಲಿಯೂ ಬರಬಾರದು. ಇವತ್ತು ಆ ರೀತಿಯಲ್ಲಿ ಒಂದು ಕಾರ್‍ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ನಬಾರ್ಡ್‌ನಿಂದ ಪ್ರತಿ ತಾಲ್ಲೂಕಿಗೆ 65 ಲಕ್ಷ ರೂಪಾಯಿಗಳ ಪಟ್ಟಿಯನ್ನು ಮಾಡಿದ್ದರು. ಈ ಸದನದಲ್ಲಿ ಮಾನ್ಯ ಕಾಡಾ ಮಂತ್ರಿಗಳು ಇಲ್ಲ. ಅವರು ಈ ಸಂದರ್ಭದಲ್ಲಿ ಇರಬೇಕಾಗಿತ್ತು. ಒಂದು ಪಟ್ಟಿಯನ್ನು ಮಾಡಿ ಎಲ್ಲರಿಗೂ ಕಳುಹಿಸಿಕೊಟ್ಟಿದ್ದೇನೆಂದು ಅವರು ಹೇಳುತ್ತಿದ್ದರು. ಈಗಾಗಲೇ ನಬಾರ್ಡ್‌ನ ಬಗ್ಗೆ ಚರ್ಚೆಯೂ ಸಹ ನಡೆದಿದೆ. ಅದು ಸಹ ಇದುವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಉದಾಹರಣೆಗೆ ಹೇಳುವುದಾದರೆ ಯಲಿಯೂರು ಎಂಬ ಗ್ರಾಮದಲ್ಲಿ 1000 ಅಡಿ ತೋಡಿದರೂ ಸಹ ನೀರು ಸಿಗುತ್ತಿಲ್ಲ. ಅದೇರೀತಿಯಾಗಿ ದೇವನಹಳ್ಳಿಯ ಸುತ್ತಮುತ್ತಲೂ ಯಾವುದೇ ಗ್ರಾಮಗಳಿಗೆ ಹೋದರೂ ಇವತ್ತಿನ ಪರಿಸ್ಥಿತಿಯಲ್ಲಿ ನೀರು ಬೇಕಾದರೆ 600 ರಿಂದ 700 ಅಡಿ ತೋಡಬೇಕಾಗುತ್ತದೆ. ಹೋದಸಾರಿ ಚೆನ್ನಾಗಿ ಮಳೆಯಾಗಿದ್ದರೂ ಸಹಿತ ನಮಗೆ ನೀರು ಬೇಕಾದರೆ ನಾವು ಅಷ್ಟು ಅಡಿ ಆಳಕ್ಕೆ ಹೋಗಬೇಕಾಗುತ್ತದೆ. ಆ ಒಂದು ಭಯದಿಂದ ನಾವು ಇವತ್ತು ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ನಮ್ಮದೇ ಸರ್ಕಾರ ಇರುವುದರಿಂದ ನಾವು ತಮ್ಮಲ್ಲಿ ನಮ್ಮ ಭಾವನೆಯನ್ನು ತೋಡಿಕೊಂಡು ಹೇಳುತ್ತಿದ್ದೇನೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) :— ಮಾನ್ಯ ಚಂದ್ರಣ್ಣನವರು ನಮಗೆ ನೀರು ಬೇಕಾದರೆ 600 ರಿಂದ 700 ಅಡಿ ತೋಡಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ನಾನು ವ್ಯವಸಾಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕೆರೆಗಳಲ್ಲಿ 7-8 ವರ್ಷಗಳಿಂದ ನೀರು ಇರಲಿಲ್ಲ. ಈಗ ಕೆರೆಗೆ ನೀರು ಬಂದಿದೆ. ಎಷ್ಟೋ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲವೆಂದು ಅವರಿಗೆ ಗೊತ್ತಿದ್ದರೂ ಸಹ ಸಮ್ಮರ್ ಕ್ರಾಪ್‌ನ್ನು ಏಕೆ ಇಡಬೇಕು? ಟೋಮೋಟೊವನ್ನು ಮಾರ್ಕೆಟ್‌ಗೆ ತಂದು ಏಕೆ ಸುರಿಯಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ :— ಬೆಂಗಳೂರಿನಲ್ಲಿ ಬದುಕಿರುವವರಿಗೆ ಹೊಟ್ಟೆಯನ್ನು ತುಂಬಿಸುವುದಕ್ಕೋಸ್ಕರ ಸಮ್ಮರ್ ಕ್ರಾಪ್‌ನ್ನು ತಂದಿರುವುದು.

ಶ್ರೀ ಎನ್. ರಾಜಣ್ಣ :— ನಾನು ಬೆಂಗಳೂರಿನ ಬಗ್ಗೆ ಹೇಳುತ್ತಿಲ್ಲ. ಕೆಲವು ಹಳ್ಳಿಗಳ ಬಗ್ಗೆ ಮಾತನಾಡುತ್ತಿರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾವು ಬೆಂಗಳೂರಿನಲ್ಲಿರುವವರ ಹೊಟ್ಟೆಯನ್ನು ತುಂಬಿಸುವುದಕ್ಕೆ ಬೆಳೆಯುತ್ತಿದ್ದೇವೆ. ತಾವು ನಿಂತುಕೊಂಡು ಏನು ಮಾತನಾಡುತ್ತಿದ್ದೀರಿ.

ಶ್ರೀ ಎನ್. ರಾಜಣ್ಣ :— ಕೆರೆಗೆ ನೀರು ಬಂದು 10 ವರ್ಷವಾಗಿತ್ತು. ಈ ಸಾರಿ ನೀರು ಬಂದಿದೆ. ಸಮ್ಮರ್ ಕ್ರಾಪ್‌ನ್ನು ಏಕೆ ಇಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ :— ಹಳ್ಳಿಯ ಜನ ಒಳ್ಳೆಯದು ಯಾವುದನ್ನೂ ತಿನ್ನುತ್ತಿಲ್ಲ. ನಾವು ಬೆಳೆದಿದ್ದನ್ನು ಇವರ ಹೊಟ್ಟೆಗೆ ತುಂಬಿಸುವುದಕ್ಕೆ ಸಾಕಾಗಿಹೋಗಿದೆ. ಆಕಸ್ಮಾತ್ ಒಳ್ಳೆಯದು ಏನಾದರೂ ಇದ್ದರೆ ಅದನ್ನು ಮಾರುತ್ತೇವೆ. ನಾವು ಕೆಟ್ಟದ್ದನ್ನು ತಿಂದುಕೊಂಡು ಬದುಕಿದ್ದೇವೆ.

(ಗೊಂದಲ)

ಛೇರ್ಮನ್ :— ಮಾನ್ಯ ರಾಜಣ್ಣನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ಚಂದ್ರಣ್ಣ :— ನಮ್ಮ ಕೋಲಾರ ಜಿಲ್ಲೆಯ ನಮ್ಮ ಪಕ್ಕದ ಊರಿನ ಕೆರೆಯಲ್ಲಿ ಮಾನ್ಯ ಕೃಷಿ ಸಚಿವರಾದ ಶ್ರೀ ಭೈರೇಗೌಡರು ಹೂಳನ್ನು ತೆಗೆಸಿದರು. ಬಹುಶಃ ಅಲ್ಲಿರುವಂತಹ ನೀರಿನ ವ್ಯವಸ್ಥೆಯನ್ನು ನೋಡಿದರೆ ನಮಗೆ ಸಂತೋಷವಾಗುತ್ತದೆ. ಈವತ್ತು ಅಲ್ಲಿ ಎಲ್ಲಾ ರೈತರುಗಳು ಸಚಿವರ ಬಗ್ಗೆ ಬಹಳ ಪ್ರಶಂಸೆಯಿಂದ ಮಾತನಾಡುತ್ತಾರೆ. ಈ ರೀತಿ ಹೂಳು ಎತ್ತಿದ್ದರಿಂದ ಸುಮಾರು ವರ್ಷಗಳಿಂದ ಕೆರೆ ತುಂಬದೇ ಇದ್ದದ್ದು ಈಗ ಕೆರೆಯಲ್ಲಿ ನೀರು ಬಂದಿದ್ದು, ಬೋರ್‌ವೆಲ್‌ಗಳು ರೀಚಾರ್ಜ್ ಆಗಿದೆ. ಈ ರೀತಿಯಾಗಿ ಅನೇಕ ಒಳ್ಳೆಯ ಮಾತುಗಳನ್ನು ಅವರು ಹೇಳಿದ್ದಾರೆ. ಉದಾಹರಣೆಗೆ ನಮ್ಮ ದೇವನಹಳ್ಳಿಯಲ್ಲಿ ಅಧ್ಯಕ್ಷರಾಗಿರುವವರು ಒಂದು ಇಟ್ಟಿಗೆಗೂಡನ್ನು ಇಟ್ಟಿದ್ದಾರೆ. ಅಲ್ಲಿಯ ಜನರು ಇಟ್ಟಿಗೆಗೂಡನ್ನು ಸುಡುವ ಸಲುವಾಗಿ ಕೆರೆಯಲ್ಲಿ ಅಗೆದು ಮಣ್ಣನ್ನು ತೆಗೆದುಕೊಳ್ಳುವುದರಿಂದ ಇವತ್ತು ಆ ಕೆರೆಯಲ್ಲಿ 2 ವರ್ಷಗಳಿಗೂ ಆಗುವಷ್ಟು ನೀರು ಬಂದು ನಿಂತಿರುತ್ತದೆ. ಇದರಿಂದಾಗಿ ಸುತ್ತಲಿನ ಬೋರ್‌ವೆಲ್‌ಗಳು ಅಲ್ಲಿರುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳು ರೀಚಾರ್ಜ್ ಆಗಿದೆ. ಈ ಕಾರ್ಯಕ್ರಮದಲ್ಲಿ 40 ಅಥವಾ 60 ಎಂದು ಅಳವಡಿಸುವುದು ಬೇಕಾಗಿಲ್ಲ. 100 ಪರ್ಸೆಂಟ್ ಈ ಕೆರೆಯನ್ನು ಡೀಸಿಲ್ಟ್ ಮಾಡುವುದಕ್ಕೆ ಈ ಕಾರ್ಯಕ್ರಮವನ್ನು ರೂಪಿಸಿದರೆ ಬಹುಶಃ ಇದಕ್ಕೆ ಕೊಡತಕ್ಕಂತಹ ಎಲ್ಲಾ ಹಣವೂ

ಸಹ ಈ ಕೆಲಸಕ್ಕಾಗಿ ವಿನಿಯೋಗವಾಗುತ್ತದೆ. ಈ ರಸ್ತೆ ರಿಪೇರಿಗಳ ಬಗ್ಗೆ ಮತ್ತು ಬೇರೆ ಬೇರೆ ಕೆಲಸ ಕಾರ್ಯಗಳಿಗೆ ಬೇರೆ ಹೆಡ್‌ನಿಂದ ಹಣವು ಸಿಗುತ್ತದೆ. ಆದರೆ ಇದರಲ್ಲಿ 10 ಲಕ್ಷ ರೂಪಾಯಿಗಳು ಸಿಕ್ಕಿದರೆ ಎಂಎಲ್‌ಎಗಳಿಗೆ ಚುನಾವಣೆಯಲ್ಲಿ ವೋಟನ್ನು ಹಾಕಿಬಿಡುತ್ತಾರೆ ಅಥವಾ ಆ ಭಾಗದಲ್ಲಿ ವೋಟುಗಳು ಸಿಗುತ್ತದೆ ಎನ್ನುವಂತಹ ಪ್ರಶ್ನೆಯಲ್ಲ. ನಿಜವಾಗಲೂ ಸಹ ಪ್ರಾಣಹಾನಿಯಾಗುವಂತಹ ವ್ಯವಸ್ಥೆಯಾಗುತ್ತದೆ. ಬಹುಶಃ ಮುಂದಿನ ಪೀಳಿಗೆಯವರಿಗೆ ಇದರಿಂದ ತೊಂದರೆಯಾಗುತ್ತದೆ; ಎನ್ನುವ ಭಾವನೆಯನ್ನು ನಾವು ವ್ಯಕ್ತ ಮಾಡುತ್ತಿದ್ದೇವೆ. ನಮ್ಮದೇ ಸರ್ಕಾರ ಅಧಿಕಾರದಲ್ಲಿರುವುದರಿಂದ, ನಮ್ಮವರೇ ಹಣಕಾಸಿನ ಸಚಿವರಾದ ಸಿದ್ಧರಾಮಯ್ಯನವರು ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ಇಟ್ಟುಕೊಳ್ಳಬೇಕು. ದಯಮಾಡಿ ಈ ಭಾಗದ 75 ಜನ ಶಾಸಕರುಗಳ ಭಾವನೆಯನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ನಾನು ಪಕ್ಷಾತೀತವಾಗಿ ಹೇಳುವಂತಹ ವಿಚಾರವಾಗಿದೆ. ದಯಮಾಡಿ ಹೆಚ್ಚಿಗೆ ಹಣವನ್ನು ಈ ಭಾಗಕ್ಕೆ ಕೊಡುವ ಬಗ್ಗೆ ತಾವು ಘೋಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ.ಎಂ. ಚೆನ್ನಿಗಪ್ಪ (ಕೊರಟಗೆರೆ) :— ಮಾನ್ಯ ಛೇರ್ಮನ್‌ರವರೆ, ನಾವು ಮತ್ತು ನಮ್ಮ ಎಲ್ಲಾ ಸ್ನೇಹಿತರು ಸರ್ಕಾರದ ಸಚಿವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ನೀರಾವರಿ ಸ್ಕೀಂನ್ನು ಮಾಡಿ ದೊಡ್ಡ ದೊಡ್ಡ ಡ್ಯಾಂಗಳನ್ನು ಅನೇಕ ಜಿಲ್ಲೆಗಳಿಗೆ ಕಟ್ಟಿಸಿಕೊಟ್ಟಿದ್ದೀರಿ ಆದರೆ ತುಮಕೂರು, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಯಾವುದೇ ಡ್ಯಾಂನ ವ್ಯವಸ್ಥೆ ಇಲ್ಲ. ಮಾನ್ಯ ಚಂದ್ರಣ್ಣನವರು ಮತ್ತು ಮಾಧುಸ್ವಾಮಿಯವರು ಹೇಳಿದ ಹಾಗೆ ಕೇವಲ ಕೆರೆಗಳನ್ನು ಹೂಳು ಎತ್ತುವುದರ ಮೂಲಕವಾಗಿ ಅದನ್ನು ದುರಸ್ಥಿ ಮಾಡಿದರೆ ಅಲ್ಲಿ ನೀರಿಗೆ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತಿತ್ತು. ಈ ಬಗ್ಗೆ ಮಾನ್ಯ ಸಚಿವರಾದ ಬೈರೇಗೌಡರು ಒಂದು ಸ್ಕೀಂನ್ನು ಮಾಡಿದ್ದರು. ಎರಡು ವರ್ಷಗಳ ಹಿಂದೆ ಒಂದು ಮೀಟಿಂಗ್‌ನ್ನು ಸೇರಿದಾಗ ಆ ಸ್ಕೀಂನ ಪ್ರಕಾರ 60 ರಿಂದ 75 ಲಕ್ಷ ರೂಪಾಯಿಗಳನ್ನು ಕೆರೆಗಳಲ್ಲಿ ಹೂಳೆತ್ತುವ ಕೆಲಸಗಳಿಗಾಗಿ ಎಲ್ಲಾ ಎಂಎಲ್‌ಗಳಿಗೆ ಕೊಡುತ್ತೇವೆಂದು ಹೇಳಿದರು. ಇದುವರೆಗೂ ಸಹ ಹಣವನ್ನು ಒದಗಿಸಿರುವುದಿಲ್ಲ. ಮಾನ್ಯ ರಾಜಣ್ಣನವರು 650 ಅಡಿ ಬೋರ್‌ವೆಲ್ ತೋಡಿದರೂ ನೀರು ಬರುವುದಿಲ್ಲ ಎಂದು ಹೇಳಿದರು. ಇದಕ್ಕೆ ಕಾರಣ ನ್ಯಾಚುರಲ್ ಲಿಮಿಟಿ ಎಂದು ನಮಗೆ ಗೊತ್ತಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಈ ಬಗ್ಗೆ ಒಂದು ಗಹನವಾದ ಮನಸ್ಸನ್ನು ಮಾಡಬೇಕು. 1/3 ಭಾಗದ ಎಂಎಲ್‌ಎಗಳು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ದಯಮಾಡಿ ಬಯಲುಸೀಮೆ ಅಭಿವೃದ್ಧಿಗೋಸ್ಕರವಾಗಿ, ಇದುವರೆಗೂ ತಮಗೆ ನೀರಾವರಿಗೋಸ್ಕರ ಖರ್ಚಾಗಿರುವಂತಹ ಹಣದಲ್ಲಿ 1/3 ಭಾಗದಷ್ಟು ಹಣವನ್ನು ನಮಗೆ ಒದಗಿಸಿದರೆ ಅನುಕೂಲವಾಗುತ್ತದೆ. ತಾವು ನೀರಾವರಿಗೋಸ್ಕರ 2 ಕೋಟಿ ಹಣವನ್ನು ಖರ್ಚುಮಾಡುವುದರಲ್ಲಿ

ನಮಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಈ ಮೂರು ಜಿಲ್ಲೆಗಳಿಗೆ ಆಗಿರುವ ಅನ್ಯಾಯವನ್ನು ನಾವು ಸರಿಪಡಿಸಬೇಕೆಂಬುದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸದನದ ಹಿರಿಯ ಸಚಿವರಾದ ಶ್ರೀ ಸಿದ್ಧರಾಮಯ್ಯನವರು ತಾವು ಈ ವಿಷಯದ ಬಗ್ಗೆ ಮನಸ್ಸು ಮಾಡಿದರೆ ಈ ವಿಷಯ ತಮಗೆ ದೊಡ್ಡದೇನಲ್ಲ. ನಾವು ಒಟ್ಟು 75 ಜನ ಎಂಎಲ್‌ಎಗಳಿದ್ದೇವೆ. ಈ ಬಯಲುಸೀಮೆ ಅಭಿವೃದ್ಧಿಗೋಸ್ಕರವಾಗಿ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ನಿಜವಾಗಿಯೂ ಸಹ ನಾವು ಪಕ್ಷಾತೀತವಾಗಿ ಮುಂದಿನ ಚುನಾವಣೆಯಲ್ಲಿ ಗೆದ್ದು ಬರುವಂತಹ ಶಕ್ತಿಯನ್ನು ನಾವೆಲ್ಲರೂ ಪಡೆದಿದ್ದೇವೆ. ಇದರಿಂದ ಈ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮಾನ್ಯ ಬೈರೇಗೌಡರು ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕಛೇರಿಯನ್ನು ಚಿತ್ರದುರ್ಗದಲ್ಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಚಿನ್ನಿಗಪ್ಪನವರೆ, ಮೊದಲು 60 ರಿಂದ 70 ಜನರನ್ನು ಮಾನ್ಯ ಸಿದ್ಧರಾಮಯ್ಯನವರು ಚುನಾವಣೆಯಲ್ಲಿ ಗೆಲ್ಲಿಸಿಕೊಳ್ಳಲಿ.

ಶ್ರೀ ಸಿ. ಚೆನ್ನಿಗಪ್ಪ :— ಅವರು ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತಾರೆ. ಅವರಿಗೆ ಆ ಶಕ್ತಿ ಇದೆ. ಮಾನ್ಯ ಸಿದ್ಧರಾಮಯ್ಯನವರು ಬಡಕುಟುಂಬದಿಂದ ಬಂದಂಥವರು. ಮಾನ್ಯ ಮಾಧುಸ್ವಾಮಿಯವರೇ, ಈ ವಿಷಯದ ಬಗ್ಗೆ ಯಾವುದೇ ಅನುಮಾನಪಡುವ ಹಾಗಿಲ್ಲ. ಮಾನ್ಯ ಕೃಷಿ ಸಚಿವರಾದ ಬೈರೇಗೌಡರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಮಗೆ ವ್ಯವಸಾಯದ ಪಿತಾಮಹರು ಎಂದು ಕರೆಯುತ್ತೇವೆ. ಮಾನ್ಯ ಮಾಧುಸ್ವಾಮಿಯವರು ತಮ್ಮನ್ನು ಟೀಕೆ ಮಾಡುತ್ತಿದ್ದರು. ತಾವೇನೂ ಮಾಡಿಲ್ಲ, ಸುಮ್ಮನೆ ಮಾಡಿದ್ದೀರಿ ಎಂದು ಹೇಳುತ್ತೀರಿ ಎಂದರು. ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ತಾವು 75 ಜನ ಎಂಎಲ್‌ಎಗಳ ಕ್ಷೇತ್ರದಲ್ಲಿ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಮುಖೇನ ನಮಗೆ ಅನುಕೂಲವನ್ನು ಮಾಡಿಕೊಡಬೇಕು. ಈ ಹಣವನ್ನು ಬರೀ ಕೆರೆಗಳಿಗೆ ಮಾತ್ರ ಉಪಯೋಗವಾಗುವ ಹಾಗೆ, ಮಾಡಬೇಕು. ಈ ಹಣ ರಸ್ತೆ ರಿಪೇರಿಗಲ್ಲ ಅಥವಾ ಮತ್ತೊಂದಕ್ಕೆ ಅಲ್ಲ ಈ ಬಯಲುಸೀಮೆ ಕೆರೆಗಳ ಅಭಿವೃದ್ಧಿಗೋಸ್ಕರವಾಗಿ ಮಾನ್ಯ ಸಿದ್ಧರಾಮಯ್ಯನವರು ದಯಮಾಡಿ ಎಲ್ಲಾ ಎಂಎಲ್‌ಎಗಳಿಗೂ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡಬೇಕು. ಈ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕಛೇರಿಯನ್ನು ತೆರೆದಿದ್ದೇವೆ. ಆ ಪ್ರದೇಶದ ಜನತೆಗೆ ಅನುಕೂಲವಾಗಲಿ ಎಂದು ಹೇಳುತ್ತಾ, ತಾವು ಅನುಕೂಲವನ್ನು ಮಾಡಿಕೊಡುತ್ತೀರೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಎಲ್ಲರೂ ಮಾತನಾಡಿರುವುದರಿಂದ ನಾನು ಅದನ್ನೇ ಹೇಳಬೇಕೆಂದು ಏನಿಲ್ಲ, ಆದರೆ ನಮ್ಮ ಉದ್ದೇಶ ಏನೆಂದರೆ, ಸರ್ಕಾರದ ಮೇಲೆ ಹೆಚ್ಚಿನ ಒತ್ತಡವನ್ನು ತರಬೇಕೆನ್ನುವುದು

ನಮ್ಮ ಉದ್ದೇಶ. ಬಯಲುಸೀಮೆ ಪ್ರದೇಶದವರು ಅಂದರೆ ಮಲೆನಾಡಿನವರು ಮೊದಲು ಹೆಣ್ಣು ಕೊಡುತ್ತಿರಲಿಲ್ಲ. ಬಯಲು ಸೀಮೆಯವರಿಗೆ ಮೊದಲು ಹೆಣ್ಣು ಕೊಡುತ್ತಿರಲಿಲ್ಲ. ಇವರಿಗೆ ಏನೂ ಸಿಗುವುದಿಲ್ಲ ಊಟ ನೀರು ತಿನ್ನುವುದಕ್ಕೂ ಗತಿಯಿಲ್ಲವೆಂದು ಹೆಣ್ಣು ಕೊಡುತ್ತಿರಲಿಲ್ಲ. ಈಗ ಏನೋ ಗೊತ್ತಿಲ್ಲ. ಮೊದಲಂತೂ ಹಾಗಿತ್ತು ಬಯಲುಸೀಮೆಯವರು ಅಂದರೆ ಆ ಕಡೆಯವರಿಗೆ ಮಲೆನಾಡಿನವರು ಹೆಣ್ಣು ಕೊಡುತ್ತಿರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಈಗಲೂ ಮಲೆನಾಡು ಒಕ್ಕಲಿಗರು ನಿಮಗೆ ಹೆಣ್ಣು ಕೊಡುವುದಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ :— ಮಾನ್ಯ ಸದಸ್ಯರು ಮೊದಲು ಮಲೆನಾಡಿನ ಕಡೆಗೆ ಹೆಣ್ಣಿಗೆ ಹೋಗಿದ್ದರಾ ಎಂದು ತಿಳಿಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಮೊದಲು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇತ್ತು ಅದನ್ನು ಈಗ ತೆಗೆದು ಬಯಲುಸೀಮೆ ಅಭಿವೃದ್ಧಿ ಮಂಡಲಿಯೆಂದು ಮಾಡಿದರು. ಅದರ ಬಗ್ಗೆ ನಮ್ಮ ಮಾಜಿ ಮುಖ್ಯಮಂತ್ರಿಗಳು ಹೇಳಿದರು. ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಬರತಕ್ಕ ವ್ಯಾಪ್ತಿ ಸಂಪೂರ್ಣವಾಗಿ ಬಡತನದಲ್ಲಿರತಕ್ಕ ವ್ಯಾಪ್ತಿ. ಇಲ್ಲಿ ಯಾವುದೇ ನೀರಾವರಿಗೆ ಸೌಲಭ್ಯವಿಲ್ಲ. ನಾವು ಸಣ್ಣ ಸಣ್ಣ ಕೆರೆಗಳು ಮತ್ತು ಬೋರ್‌ವೆಲ್‌ಗಳ ಆಧಾರದಿಂದ ಅಲ್ಪಸ್ವಲ್ಪ ಬೆಳೆಯನ್ನು ಬೆಳೆದುಕೊಂಡು ಬರತಕ್ಕ ಜನ. ಇಂತಹ ಪ್ರದೇಶಗಳನ್ನು ಗುರುತಿಸಿ ಬಯಲುಸೀಮೆ ಅಭಿವೃದ್ಧಿ ಮಂಡಳಿಯೆಂದು ರಚನೆ ಮಾಡಿ, ಮಾನ್ಯ ಕೃಷಿ ಸಚಿವರು ಅವರ ಮನೆಯಲ್ಲಿ ಸಭೆ ಕರೆದು ನಮ್ಮನ್ನೆಲ್ಲಾ ಕರೆದು ಅವರಲ್ಲಿದ್ದ ಆಸೆ ಆಕಾಂಕ್ಷೆಗಳನ್ನು ನೋಡಿದರೆ, ನಾವೇನು ನಿರೀಕ್ಷೆ ಮಾಡಿದ್ದೆವು ಅಂದರೆ ನಾವು ಈ ಮಂಡಳಿಗೆ ಸದಸ್ಯರಾಗಿ ನಾನು ಐದು ವರ್ಷಗಳಲ್ಲಿ ಸಾಕಷ್ಟು ಸಾಧನೆಯನ್ನು ಪ್ರಗತಿಯನ್ನು ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮಾಡಬಹುದು ಎನ್ನುವ ಅಭಿಪ್ರಾಯವನ್ನು ಅವರು ಅವೊತ್ತು ನಮಗೆ ಮೂಡಿಸಿದರು. ಆದರೆ ಏನಾಯಿತು? ಸಂಪೂರ್ಣವಾದಂತಹ ಭ್ರಮನಿರಸನ. ಇವತ್ತು ಅಲ್ಪಸ್ವಲ್ಪ ಅಭಿವೃದ್ಧಿಯನ್ನು ನಮ್ಮ ಬಯಲುಸೀಮೆ ಕ್ಷೇತ್ರದಲ್ಲಿ ಈ ಮಂಡಳಿಯಿಂದ ಸಾಧನೆಯನ್ನು ಮಾಡಿದ್ದೇವೆ ಹೇಳಿಕೊಳ್ಳತಕ್ಕ ಶಕ್ತಿ ನಮಗೆ ಇಲ್ಲ. ನಾವು ಅನೇಕ ಬಾರಿ ಚಿತ್ರದುರ್ಗಕ್ಕೆ ಸಭೆಗಳಿಗೆ ಎಂದು ಹೋದೆವು. ಇಲ್ಲಿಂದ ಚಿತ್ರದುರ್ಗಕ್ಕೆ ಸುಮಾರು 300-400 ಕಿಲೋಮೀಟರ್ ದೂರಗಳಿಂದ ಸದಸ್ಯರುಗಳು ಬಂದರು. ಏನಾದರೂ ಈ ಮಂಡಳಿಯಿಂದ ನಮ್ಮ ಕ್ಷೇತ್ರಕ್ಕೆ ಸಹಾಯವಾಗಬಹುದೇನೋ ಎನ್ನುವ ಆಸೆಯನ್ನಿಟ್ಟುಕೊಂಡು ಸದಸ್ಯರುಗಳು ಹೋಗಿದ್ದೆವು. ಮಾನ್ಯ ಬೈರೇಗೌಡರು ಸುಮಾರು ಸಲ ಈ ಸಭೆಗಳಿಗೆ ಬಂದರು. ಏನಾಗಿದೆ ಇವತ್ತು? ನಿಮ್ಮ ಉದ್ದೇಶವೇನು? ಈ ಮಂಡಳಿಯನ್ನು ರಚನೆ ಮಾಡಿದಂತಹ ಉದ್ದೇಶವೇನು? ಏನೂ ಸಾಧನೆ ಮಾಡಲಿಕ್ಕೆ ಆಗದೇಹೋದರೆ ಏತಕ್ಕೆ

ಈ ಮಂಡಳಿಯಲ್ಲಿ ನೀವು ಅಧಿಕಾರಿಗಳನ್ನು ಇಟ್ಟುಕೊಂಡು ಹಣ ವ್ಯಯ ಮಾಡುತ್ತೀರಿ? ಮೊನ್ನೆ ಒಂದು ಸಬ್ಜೆಕ್ಟ್ ಬಂತು ಕಾಂಟೆನ್ಸ್ಟಾ ಕಾರನ್ನು ಅಧ್ಯಕ್ಷರಿಗೆ ಕೊಳ್ಳುವ ಬಗ್ಗೆ ಎಂದು. ನಮ್ಮನ್ನೆಲ್ಲಾ ಸಭೆಗೆ ಕರೆದು ಆ ಸಬ್ಜೆಕ್ಟನ್ನು ರ್‍ಯಾಟಿಫಿಕೇಷನ್ ಮಾಡಿದರು. ಅಂದರೆ ಇಂತಹ ಸಭೆಗಳನ್ನು ಮಾಡುವುದಕ್ಕೋಸ್ಕರ ಇಂತಹ ಮಂಡಳಿಯನ್ನು, ಅಭಿವೃದ್ಧಿ ಕಾಣದೇ ಇರತಕ್ಕ ಪ್ರದೇಶಗಳನ್ನು ಒಳಗೊಂಡು ರಚಿಸಿರತಕ್ಕ ಒಂದು ಮಂಡಳಿಯನ್ನು ರಚಿಸಿ, ಕಾಂಟೆಸ್ಸಾ ಕಾರನ್ನು ಪರ್ಚೇಸ್ ಮಾಡಲಿಕ್ಕೆ ಸದಸ್ಯರುಗಳನ್ನು ಕರೆದು ಮೀಟಿಂಗ್‌ಗಳನ್ನು ಮಾಡುವುದಾದರೆ, ಇದು ಖಂಡಿತವಾಗಿಯೂ ಇದು ಬಹಳ ದುರದೃಷ್ಟಕರವಾದ ಸಂಗತಿ. ನಾನಾದರೂ ಕೂಡ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ, ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ. ಇವತ್ತು ಬಯಲುಸೀಮೆ ಮಂಡಳಿಯ ಕಾರ್ಯವೈಖರಿ ನಮ್ಮ ಸರ್ಕಾರದ ಸಾಧನೆಯೆಂದು ನೀವು ಏನಾದರೂ ಹೇಳಿಕೊಳ್ಳುವುದಾದರೆ, ಖಂಡಿತವಾಗಿಯೂ ಕೂಡ ಈ ಮಂಡಳಿಯಲ್ಲಿರತಕ್ಕ ಸದಸ್ಯರುಗಳು ನಾವ್ಯಾರೂ ನಮ್ಮ ನಮ್ಮ ಕ್ಷೇತ್ರಗಳಿಗೆ ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ ಸಾಕಷ್ಟು ಅಭಿವೃದ್ಧಿ ಕೆಲಸವನ್ನು ಮಾಡಿದ್ದೇವೆಂದು ನಾವು ಹೇಳಿಕೊಳ್ಳುವ ಮಾತೇನೂ ಇಲ್ಲ. ದಯಮಾಡಿ ನೀವು ಇದರ ಬಗ್ಗೆ ಚಿಂತನೆ ಮಾಡಬೇಕು. ಈವೊಂದು ಮಂಡಳಿಯನ್ನು ಉಳಿಸಿಕೊಂಡು ಅಭಿವೃದ್ಧಿ ಕಾಣದೇ ಇರತಕ್ಕ ಪ್ರದೇಶಗಳಿಗೆ ಹೆಚ್ಚು ಕೆಲಸಗಳನ್ನು ಮಾಡತಕ್ಕ ಅವಕಾಶವಿದೆ. ಸದಸ್ಯರುಗಳು ಗೆದ್ದು ಬರುವುದು ಅದು ಬೇರೆ ವಿಷಯ. ಈ ಪ್ರದೇಶಗಳು ನಿಜವಾಗಲೂ ಅಭಿವೃದ್ಧಿಯಾಗಬೇಕಾಗಿರತಕ್ಕ ಪ್ರದೇಶ. ಕಳೆದ ನಾಲ್ಕೂವರೆ ವರ್ಷಗಳಿಂದ ನಾವು ಸದಸ್ಯರುಗಳಾಗಿದ್ದೇವೆ. ಒಂದೊಂದು ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೊಂದು ಕೆರೆಗಳನ್ನು ತೆಗೆದುಕೊಂಡು ಹೂಳೆತ್ತತಕ್ಕ ಕಾರ್ಯಕ್ರಮ ಮಾಡಲಿಕ್ಕೆ ಆಗಲಿಲ್ಲ. ಇವತ್ತು ಶೇಕಡ 60/40 ರ ಅನುಪಾತದಲ್ಲಿ ಸಾಕಷ್ಟು ಕೆಲಸಗಳನ್ನು ಮಾಡುತ್ತೇವೆಂದು ನಮ್ಮಿಂದ ಕಾಮಗಾರಿ ಪಟ್ಟಿಗಳನ್ನು ಪಡೆದುಕೊಂಡರು ಅವು ಏನಾಯಿತು? ಯಾವುದಾದರೂ ಒಂದು ಕ್ಷೇತ್ರದಲ್ಲಿ ಹೂಳೆತ್ತತಕ್ಕ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆಂದು ಹೇಳಿಕೊಳ್ಳತಕ್ಕ ಪರಿಸ್ಥಿತಿ ಇದೆಯಾ ಇವತ್ತು? ಮಾನ್ಯ ರಾಜಣ್ಣನವರು ಹೇಳುತ್ತಿದ್ದರು, ಅಂತರ್ಜಲ ಹೊರಟುಹೋಗುತ್ತದೆಂದು. ಅಂತರ್ಜಲವನ್ನು ಅಭಿವೃದ್ಧಿ ಮಾಡಲಿಕ್ಕೆ ನೀವು ಕೆರೆಗಳಲ್ಲಿರತಕ್ಕ ಹೂಳನ್ನು ಎತ್ತಬೇಕು. ಅದು ಬಹಳ ಮುಖ್ಯವಾದುದು. ನೀವು ಪಿಕ್ ಅಪ್ ಡ್ಯಾಮ್‌ಗಳನ್ನು ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಸಿದ್ಧರಾಮಯ್ಯನವರಿಗೆ ಕೇಳುತ್ತೇನೆ, ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರ ಖರ್ಚು ಮಾಡುತ್ತಿರುವ ಹಣ, ಇಡೀ ರಾಜ್ಯದ ಹಳ್ಳಿಗಳಿಗೆ ಖರ್ಚು ಮಾಡುತ್ತಿರುವ ಹಣ ಎಲ್ಲಾ ಕಡೆ ಸಾಲ ತಂದಿರುವುದನ್ನು ಹಿಡಿದುಕೊಂಡು ಅದರ ಬಗ್ಗೆ ಇಲ್ಲೊಂದು ಶ್ವೇತಪತ್ರ ಇಟ್ಟುಬಿಟ್ಟರೆ ನಾವು ಶರಣಾಗಿಬಿಡುತ್ತೇವೆ, ಒಂದೊಂದು ತಲೆಗೆ ಹಳ್ಳಿ ಜನ ಎಷ್ಟು ಟ್ಯಾಕ್ಸ್ ಕೊಡುತ್ತಿದ್ದೇವೆನ್ನುವುದು ನಮಗೆ ಗೊತ್ತು. ಇವರು ನಾಲ್ಕು ಆಣೆಗೆ ತರಕಾರಿ ಟೊಮ್ಯಾಟೊ ತಂದು ಸಾರು ಮಾಡುವುದಕ್ಕೆ ನಾವು

ಅಲ್ಲಿ ಎಷ್ಟು ಕಷ್ಟಪಡುತ್ತಿದ್ದೇವೆನ್ನುವುದು ಅವರಿಗೆ ಗೊತ್ತಿದ್ದರೆ ಅವರು ಈ ಮಾತುಗಳನ್ನು ಆಡುತ್ತಿರಲಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಇವತ್ತು ಅಂತರ್ಜಲದ ಮಟ್ಟ ಸಂಪೂರ್ಣವಾಗಿ ಕುಸಿದು ಹೋಗುತ್ತಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಇದನ್ನು ಏನಾದರೂ ಅಭಿವೃದ್ಧಿ ಮಾಡಬೇಕೆನ್ನುವ ಕಾಳಜಿ ಸರ್ಕಾರಕ್ಕೆ ಇದ್ದರೆ ಆ ಚಿಂತನೆ ಸರ್ಕಾರಕ್ಕೆ ಇದ್ದರೆ ನೀವು ಇವತ್ತು ವಾಟರ್‌ಶೆಡ್ ಪ್ರೋಗ್ರಾಮ್‌ನಲ್ಲಿ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಅಂತಹ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಹೆಚ್ಚಿನ ರೀತಿಯಲ್ಲಿ ಅವಕಾಶವಾಗುತ್ತಿತ್ತು. ನೀವು ಆ ಚಿಂತನೆಯನ್ನು ಮಾಡಲಿಲ್ಲ. ನೀವು ಮಾಡಬೇಕಾಗಿತ್ತು ನಾವು ನಿರೀಕ್ಷೆ ಮಾಡಿದ್ದೆವು. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಹೆಚ್ಚಿನ ಒತ್ತನ್ನು ಕೊಡತಕ್ಕ ಕೆಲಸ ಇದರಿಂದ ಆಗುತ್ತಿತ್ತು. ಇವತ್ತು ಇಂತಹ ಮಂಡಳಿಯನ್ನು ಮಾಡಿ ಏನೂ ಕೆಲಸವನ್ನು ಸರ್ಕಾರ ಮಾಡದೆ ನಮ್ಮನ್ನೂ ಕೂಡ ಸದಸ್ಯರುಗಳನ್ನಾಗಿ ಮಾಡಿ ಕೊನೆಗೆ ಬರೀ ಶೂನ್ಯ ಸಾಧನೆಯನ್ನು ಮಾಡಿರುವುದಕ್ಕೆ ಖಂಡಿತವಾಗಿಯೂ ನಾವೆಲ್ಲಾ ಮನ ನೊಂದಿದ್ದೇವೆ. ಇನ್ನಾದರೂ ಕೂಡ ಸ್ವಲ್ಪ ಅವಕಾಶವಿದೆ. ಈಗಲಾದರೂ ಕೂಡ ಸರ್ಕಾರ ಇದರ ಬಗ್ಗೆ ಚಿಂತನೆಯನ್ನು ಮಾಡಿ ಈ ಮಂಡಳಿಯನ್ನು ಪುನಶ್ಚೇತನಗೊಳಿಸಿ 75 ಕ್ಷೇತ್ರಗಳನ್ನು ಒಳಗೊಂಡಿರತಕ್ಕ ಏನೊಂದು ಬಯಲುಸೀಮೆ ಪ್ರದೇಶವಿದೆ ಅಭಿವೃದ್ಧಿ ಹೆಚ್ಚಿನ ರೀತಿಯಲ್ಲಿ ಆಗತಕ್ಕ ಪ್ರದೇಶವೇನಿದೆ, ಈ ಪ್ರದೇಶದಲ್ಲಿ ಹೆಚ್ಚಿನ ಕಾಮಗಾರಿಗಳನ್ನು ಕೈಗೊಳ್ಳತಕ್ಕ ಮನಸ್ಸನ್ನು ಸರ್ಕಾರ ಮಾಡುತ್ತದೆನ್ನುವ ಆಸೆಯನ್ನು ಇಟ್ಟುಕೊಂಡು ಆದರ ಬಗ್ಗೆ ನಾನು ಒತ್ತಾಯವನ್ನೂ ಸಹ ಮಾಡುತ್ತಿದ್ದೇನೆ, ಇದನ್ನು ಪುನಶ್ಚೇತನಗೊಳಿಸಿ ಇದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಹೆಚ್ಚು ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

+ಶ್ರೀ ಆರ್.ಜಿ. ವೆಂಕಟಾಚಲಯ್ಯ (ದೊಡ್ಡಬಳ್ಳಾಪುರ) :— ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾಗಿ ನಮಗೆ ಆಗಬೇಕಾದ್ದು ಕೆರೆಗಳಲ್ಲಿ ಹೂಳು ತೆಗೆಯತಕ್ಕ ವಿಚಾರ. ಕಳೆದ ವರ್ಷ ಕೂಡ ಇದೇ ಸಂದರ್ಭದಲ್ಲಿ ಮಾತನಾಡಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರು ಮತ್ತು ಮುಖ್ಯಮಂತ್ರಿಗಳು ಆದಷ್ಟು ಜಾಸ್ತಿ ಆ ಕೆಲಸವನ್ನು ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದರು. ಈಗ ಸಿದ್ಧರಾಮಯ್ಯನವರು ತಲೆ ಅಲ್ಲಾಡಿಸುತ್ತಿದ್ದಾರೆ. ಬಯಲುಸೀಮೆಯವರನ್ನು ಕಂಡರೆ ಸಿದ್ಧರಾಮಯ್ಯನವರಿಗೆ ಒಳಗಡೆ ಏನೋ ಸ್ವಲ್ಪ ವೈಷಮ್ಯ ಇದ್ದಹಾಗೆ ಕಾಣುತ್ತಿದೆ. ಮಾನ್ಯ ಮೊಯಿಲಿಯವರು ಹೇಳಿದಹಾಗೆ, ಡಿಪಿಎಪಿ ಪ್ರೋಗ್ರಾಮ್‌ನಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದೆಂದು. ತೆಗೆದುಕೊಂಡಿದ್ದೇವೆ, ನಾನು ಬೆಂಗಳೂರು ಜಿಲ್ಲಾಪಂಚಾಯಿತಿ ಅಧ್ಯಕ್ಷನಾಗಿದ್ದಾಗ ನಾನು ಒಂದೂವರೆ ಕೋಟಿ ರೂಪಾಯಿ ಕೆಲಸ ನಾವು ತೆಗೆದುಕೊಂಡಿದ್ದೇವೆ. ಆದರೆ ಆದರಲ್ಲಿ ಹೂಳೆತ್ತುವ ಕಾರ್ಯಕ್ರಮ ಅದರಲ್ಲಿ ಇಲ್ಲ. ಮರ ಗಿಡ ಕೊಡತಕ್ಕದ್ದು. ಅಲ್ಲೇ ಕಮಿಟಿ ಇದೆ ಆ ಕಾರ್ಯಕ್ರಮ ಮಾಡತಕ್ಕ

ಕೆಲಸವಿದೆ. ಆದರೆ ಕೆರೆಗಳ ಹೂಳು ತೆಗೆಯತಕ್ಕ ಕಾರ್ಯಕ್ರಮ ಬಹಳ ಮುಖ್ಯವಾಗಿ ಆಗಬೇಕಾದದ್ದು ಬಯಲುಸೀಮೆಯೊಳಗೆ ಈ ಕಾರ್ಯಕ್ರಮವನ್ನು ಸಣ್ಣನೀರಾವರಿಯಲ್ಲಿ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೆವು. ಕಳೆದ ವರ್ಷ ಸಣ್ಣ ನೀರಾವರಿಯೊಳಗೆ ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕಿಗೆ 98 ಲಕ್ಷ ರೂಪಾಯಿಗಳ ಅಪ್ರೂವಲ್ ಕೊಟ್ಟು 13 ಸಾವಿರ ರೂಪಾಯಿಗಳನ್ನು ಇಟ್ಟಿದ್ದರು. 1998-99ಕ್ಕೆ 13 ಸಾವಿರ ರೂಪಾಯಿ. ಮೊನ್ನೆ ಇದರ ಬಗ್ಗೆ ತಿಪ್ಪೇಸ್ವಾಮಿಗಳಲ್ಲಿ ಗಲಾಟೆಮಾಡಿದೆವು. ಈ 13 ಸಾವಿರ ಏತಕ್ಕೆ ಇಟ್ಟಿದ್ದೀರಿ ಎಂದು. ಆದ್ದರಿಂದ ನಾನು ಕೇಳುವುದು ಎಷ್ಟೇ ಆಗಲಿ ಸರ್ಕಾರದಲ್ಲಿ ಏನಿದೆ ಆ ದುಡ್ಡನ್ನು ಇಟ್ಟು ಒಂದು ಕೆರೆ ಆಗಲಿ ಅಥವಾ ಎರಡು ಕೆರೆಯ ಹೂಳನ್ನು ತೆಗೆಯಬೇಕು. ನಾನು ಮಾನ್ಯ ಜಾಲಪ್ಪನವರು ಕಷ್ಟಪಟ್ಟು ಲಕ್ಷ್ಮೀದೇವಿಪುರದ ಟ್ಯಾಂಕ್‌ನ ಡೀಸಿಲ್ಟ್ ಮಾಡಿಸಿದೆವು. ಅದರದ್ದು ಇನ್ನು ಪೂರ್ತಿ ದುಡ್ಡು ಕೊಟ್ಟಿಲ್ಲ. ಹೋದವರ್ಷ ಕೊಡಲಿಕ್ಕೆ ಆಗಲಿಲ್ಲ ಈ ವರ್ಷದ ಬಜೆಟ್‌ನಲ್ಲಿ ಸೇರಿಸಿ ಎಂದು ಹೇಳುತ್ತಾರೆ. ದಯಮಾಡಿ ನಾನು ನಿಮ್ಮನ್ನು ಕೇಳಿಕೊಳ್ಳುವುದು ಇಷ್ಟೆ, ಬಯಲುಸೀಮೆಗೆ ದುಡ್ಡು ಜಾಸ್ತಿ ಕೊಡಬೇಕು. ದುಡ್ಡು ಜಾಸ್ತಿ ಕೊಟ್ಟರೂ ಕೂಡ ರಸ್ತೆ ಕೆಲಸಗಳನ್ನು ಕಡಿಮೆ ಮಾಡಿ ಕೆರೆಯ ಹೂಳು ತೆಗೆಯತಕ್ಕ ಕಾರ್ಯಕ್ರಮವನ್ನು ಮಾಡದೇ ಹೋದರೆ ಬಹುಶಃ ನಮಗೆ ನೀರು ಸಿಗುವುದಿಲ್ಲ. ಮೊನ್ನೆ ಮಳೆ ಬಂತು, ಕೆರೆಗಳೆಲ್ಲಾ ತುಂಬಿಕೊಂಡಿವೆ, ಮೂರು ದಿವಸಗಳಿಗೆ ಕೆರೆಗಳು ಇಂಗಿ ಹೋಗಿವೆ. ನಮ್ಮಲ್ಲಿ ಕೆರೆಗಳು ತುಂಬಿ ಕೋಡಿ ಬಿದ್ದಿದ್ದವು. ನೀರನ್ನು ವ್ಯವಸಾಯಕ್ಕೆ ಬಿಡಲಿಲ್ಲ ಎರಡು ತಿಂಗಳಿಗೆ ಆ ನೀರೆಲ್ಲಾ ಇಂಗಿ ಹೋಯಿತು. ಆ ಮಟ್ಟದಲ್ಲಿ ಇವತ್ತು ನೀರಿನ ಮಟ್ಟ ಕೆಳಗಡೆ ಹೋಗುತ್ತಿದೆ. ದಯಮಾಡಿ ಮಾನ್ಯ ಸಿದ್ಧರಾಮಯ್ಯನವರು ನಮ್ಮಗಳ ಕಡೆಗೆ ಕರುಣೆಯಿಟ್ಟು, ಬೇರೆ ಮಂಡಳಿಗಳಿಗೆ ಕೊಡಿ ಬಿಡಿ ಅದನ್ನು ನಾವು ಕೇಳುವುದಿಲ್ಲ. ಈ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಜಾಸ್ತಿ ದುಡ್ಡುಕೊಡಬೇಕು. ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕೇಂದ್ರ ಕಛೇರಿಯನ್ನು ಬೆಂಗಳೂರಿಗೆ ವರ್ಗಾಯಿಸಬೇಕು. ಒಂದು ವೇಳೆ ನಿಮಗೆ ಹಣವನ್ನು ಕೊಡಲಿಕ್ಕೆ ಆಗದಿದ್ದರೆ ನಮಗೆ ಒಂದೂವರೆ ಎರಡೂವರೆ ಲಕ್ಷ ರೂಪಾಯಿಗಳನ್ನು ದಯವಿಟ್ಟು ಕೊಡಬೇಡಿ. ನಮ್ಮಲ್ಲಿ ಆರೂವರೆ ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದರು. ನಿನ್ನೆ ನನಗೊಂದು ಆರ್ಡರ್ ಬಂದಿದೆ ಮೂರೂವರೆ ಲಕ್ಷ ರೂಪಾಯಿಗಳ ಕೆಲಸ ಅಪ್ರೂವಲ್ ಮಾಡಿದ್ದೇವೆ. ಎರಡು ಲಕ್ಷ ನಿಮಗೆ ರಿಲೀಸ್ ಮಾಡಿದ್ದೇವೆಂದು. ಈ ವರ್ಷಕ್ಕೆ ಅದು ಎಲ್ಲರಿಗೂ ಬಂದಿದೆ. ಎರಡು ಲಕ್ಷ ನಿಮಗೆ ರಿಲೀಸ್ ಮಾಡಿದ್ದೇವೆಂದು. ಈ ವರ್ಷಕ್ಕೆ ಅದು ಎಲ್ಲರಿಗೂ ಬಂದಿದೆ. ಎರಡು ಲಕ್ಷ ಮೂರು ಲಕ್ಷಗಳಿಗೆ ನಮ್ಮನ್ನು ಛೇರ್ಮನ್ ಮಾಡಿ ನಮ್ಮನ್ನು ಸದಸ್ಯರನ್ನಾಗಿ ಮಾಡಿ ಏನು ಪ್ರಯೋಜನ? ಅಲ್ಲಿ ನಾವು ರೈತರಿಗೆ ಹೇಳುತ್ತೇವೆ, ನಮ್ಮ ಮಾನ್ಯ ಮಾಧುಸ್ವಾಮಿಯವರು ಹೇಳಿದಹಾಗೆ, ಶಾಸಕರಿಗೆ ಇರುವುದು ಇದೊಂದೇ ನಾವು ಧೈರ್ಯವಾಗಿ ಈ ಕೆಲಸ ಮಾಡಿಕೊಡುತ್ತೇವೆಂದು. ಅಲ್ಲಿ ನಾವು ಜನರಿಗೆ ನಿಮ್ಮ ಕೆಲಸ ಸೇರಿಸಿದ್ದೇವೆಂದು ಹೇಳಿಬಿಡುತ್ತೇವೆ. ಇಲ್ಲಿ ನೀವು ಕೆಲಸಗಳನ್ನು ಸೇರಿಸುವುದಿಲ್ಲ. ಅಲ್ಲಿ ನಾವು ಅವರುಗಳ ಕೈಯಲ್ಲಿ

ಉಗಿಸಿಕೊಳ್ಳಬೇಕು ಇಲ್ಲಿ ಕೆಲಸನೂ ಆಗುವುದಿಲ್ಲ. ದಯಮಾಡಿ ಇದಕ್ಕೆ ಜಾಸ್ತಿ ಅಮೌಂಟ್ ಕೊಡಬೇಕು. ನೀವು ಹಣ ಕೊಡುವುದಕ್ಕೆ ಆಗದೇಹೋದರೆ ದಯವಿಟ್ಟು ಈ ಮಂಡಳಿಯನ್ನು ಮುಚ್ಚಿಬಿಡಿ. ಆ ಎಸ್ಟಾಬ್ಲಿಷ್‌ಮೆಂಟ್ ಏತಕ್ಕೆ, ಅದಕ್ಕೊಬ್ಬ ಛೇರ್ಮನ್ ಏತಕ್ಕೆ? ಅದಕ್ಕೊಬ್ಬ ಸೆಕ್ರೆಟರಿ, ಅಲ್ಲೊಂದು ಕಮಿಟಿ ಆದೆಲ್ಲಾ ಏಕೆ? ದಯವಿಟ್ಟು ಈ ಕೆಲಸ ಮಾಡಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

+ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ):— ಮಾನ್ಯ ಛೇರ್ಮನ್‌ರವರು ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಕೊಡಿ. ಈಗಾಗಲೇ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಬಗ್ಗೆ ಇರತಕ್ಕ ವಾಸ್ತವಾಂಶವನ್ನು ಮಾತನಾಡಿದಂತಹ ಸದಸ್ಯರುಗಳೆಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಸ್ಥಾಪನೆ ಮಾಡಿದಂತಹ ಉದ್ದೇಶ, ಮಳೆ ಅತಿ ಕಡಿಮೆಬೀಳತಕ್ಕ ಪ್ರದೇಶದಲ್ಲಿ ಆಕಸ್ಮಿಕವಾಗಿ ಬೀಳತಕ್ಕ ಮಳೆಯ ನೀರನ್ನು ತಡೆದು ಇಟ್ಟುಕೊಳ್ಳಬೇಕು ಅಲ್ಲಿ ಅಂತರ್ಜಲವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕೆನ್ನುವ ಒಂದು ಸದುದ್ದೇಶದಿಂದ ಬಂದಂತಹ ಈ ಮಂಡಳಿ. ಅದರಲ್ಲೂ ವಿಶೇಷವಾಗಿ ಕೃಷಿ ಕಾರ್ಯಚಟುವಟಿಕೆಗಳನ್ನು ಹೆಚ್ಚಿಗೆ ಬಯಲುಸೀಮೆ ಪ್ರದೇಶದಲ್ಲಿ ಮಾಡಬೇಕು ಅದರಿಂದ ಅಲ್ಲಿನ ಜನಜೀವನದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಬೇಕೆನ್ನುವ ಒಂದು ಉದ್ದೇಶ ಸಹ ಇತ್ತು. ಆದರೆ ದುರಾದೃಷ್ಟ ಅದಕ್ಕೆ ಕನಿಷ್ಟ ಕೊಡತಕ್ಕಂಥ ಹಣವನ್ನು ಕೊಡಲಿಕ್ಕೆ ಆಗಲಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಕೇವಲ 4 ಕೋಟಿ 18 ಲಕ್ಷ ರೂಪಾಯಿಗಳನ್ನು ಈ ಬೋರ್ಡಿಗೆ ಕೊಟ್ಟಿದ್ದಾರೆ. ಒಂದು ಕ್ಷೇತ್ರಕ್ಕೆ 6 ಲಕ್ಷದ 80 ಸಾವಿರ ಮಾತ್ರ ಬರುತ್ತದೆ. ಇಂತಹ ಒಂದು ಮಂಡಳಿಯಿಂದ ಕೇವಲ 6 ಲಕ್ಷದ 80 ಸಾವಿರ ರೂಪಾಯಿ ಅಂದರೆ, ನಮಗೆ ಒಂದು ತರಹ ನಗೆಪಾಟಲು ಆಗುತ್ತದೆ. ಇದರ ಮೂಲಭೂತ ಉದ್ದೇಶ ಆ ಪ್ರದೇಶಗಳಲ್ಲಿರತಕ್ಕ ಕೆರೆಗಳ ಹೂಳೆತ್ತಬೇಕು. ಆಕಸ್ಮಿಕವಾಗಿ ಬರತಕ್ಕ ಮಳೆಯ ನೀರನ್ನು ಆ ಕೆರೆಗಳಲ್ಲಿ ಶೇಖರಣೆ ಮಾಡಿಕೊಳ್ಳಬೇಕು, ಅದರಿಂದ ಅಂತರ್ಜಲ ಜಾಸ್ತಿ ಮಾಡಿಕೊಳ್ಳಬೇಕು. ಇವತ್ತು ನಾವು ಬೋರ್‌ವೆಲ್‌ನಲ್ಲಿ 500-600 ಅಡಿ ಆಳಕ್ಕೆ ಹೋಗಿದ್ದೇವೆ. ಪರಿಸ್ಥಿತಿ ಬಹಳ ತೀವ್ರವಾಗಿ ಗಂಭೀರವಾಗಿದೆ. ಬಹುಶಃ ಇದೇರೀತಿ ಇನ್ನೊಂದು ಹತ್ತು ವರ್ಷ ನಡೆದಿದ್ದೇ ಆದರೆ ನಮ್ಮ ಕೋಲಾರ ಜಿಲ್ಲೆ ಮತ್ತು ಕೆಲವು ಜಿಲ್ಲೆಗಳು ಬರಡಾಗಿ ಮರಳುಗಾಡಾಗತಕ್ಕ ಪರಿಸ್ಥಿತಿ ಇದೆ. ಅಂತಹ ಒಂದು ಸನ್ನಿವೇಶ ಸಹ ಕಂಡುಬರುತ್ತಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇವತ್ತು ನೀವು ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ಹೆಚ್ಚಿನ ಹಣವನ್ನು ಕೊಡುತ್ತಿದ್ದೀರಿ. ನಾವೂ ಕೂಡ ಈ ಮಂಡಳಿಗೆ ಸರ್ಕಾರದಿಂದ ಹೆಚ್ಚಿನ ಹಣ ಸಹಾಯವನ್ನು ಕೊಡಿಸಿಕೊಡಬೇಕೆಂದು ಒತ್ತಾಯವನ್ನೂ ಸಹ ತಂದಿದ್ದೇವೆ. ಮತ್ತೊಂದು ಒತ್ತಾಯವನ್ನು ಕೃಷಿ ಇಲಾಖೆಯ ಅಡಿಯಲ್ಲಿರತಕ್ಕ ಬಯಲುಸೀಮೆ ಅಭಿವೃದ್ಧಿ ಮಂಡಳಿಯನ್ನು ಯೋಜನಾ ಇಲಾಖೆಯ ಅಡಿಯಲ್ಲಿ ಕೊಡಬೇಕು. ಆ ಯೋಜನೆಗೆ ಪ್ಲಾನಿಂಗ್ ಮಾಡತಕ್ಕಂಥ ಸಂದರ್ಭದಲ್ಲಿ ಮಲೆನಾಡಿ ಅಭಿವೃದ್ಧಿ ಮಂಡಳಿ ಮತ್ತು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯಾವರೀತಿ ಪ್ಲಾನಿಂಗ್ ನಲ್ಲಿ ಬರುತ್ತದೆಯೋ ಇದೂ ಸಹ ಅದರ ಅಡಿಯಲ್ಲಿ ಬಂದಾಗ ಅದಕ್ಕೆ ಶಾಶ್ವತವಾಗಿ ಬಜೆಟ್‌ನಲ್ಲಿ ಅನುದಾನ ಕೊಡತಕ್ಕಂಥ ಅವಕಾಶ ಲಭಿಸುತ್ತಿದೆ. ಈ ಕಾರಣದಿಂದ ಈಗಾಗಲೇ ಬಯಲುಸೀಮೆ ಅಭಿವೃದ್ಧಿ ಮಂಡಲಿಯಲ್ಲೂ ಇದರ ಬಗ್ಗೆ ನಿರ್ಣಯಮಾಡಿ ಸರ್ಕಾರಕ್ಕೆ ಒತ್ತಾಯವನ್ನು ತಂದಿದ್ದೇವೆ. ಆದ್ದರಿಂದ ಸರ್ಕಾರ ಶಿಫಾರಸ್ಸು ಮಾಡಿರತಕ್ಕಂಥ ಈ ಒಂದು ಕೃಷಿ ಇಲಾಖೆಯ ಅಡಿಯಲ್ಲಿ ಇರತಕ್ಕಂಥ ಇದನ್ನು ಯೋಜನಾ ಇಲಾಖೆಯ ಅಡಿಯಲ್ಲಿ ತರಬೇಕು ಮತ್ತು ಮುಂದೆ ಇದಕ್ಕೆ ಹೆಚ್ಚಿನ ಅನುದಾನ ಕೊಡಬೇಕೆಂದು ಆ ಪ್ರದೇಶದ ಜನತೆಯ ಪರವಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ ಶ್ರೀಮತಿ ಎನ್. ಜ್ಯೋತಿರೆಡ್ಡಿ (ಗೌರಿಬಿದನೂರು) :— ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತು ಸದಸ್ಯರೆಲ್ಲಾ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ದುಡ್ಡು ಜಾಸ್ತಿ ಕೊಡಿ ಎಂದು ಕೇಳಿಕೊಂಡರು. ನನ್ನ ಕಷ್ಟ ಏನೆಂದರೆ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನೂ ಬಯಲುಸೀಮೆ ಅಭಿವೃದ್ಧಿ ಮಂಡಲಿಯಲ್ಲಿ ಸೇರಿಸಿದ್ದಾರೆ. ಗೌರಿಬಿದನೂರು ಗಡಿಪ್ರದೇಶವಾಗಿದ್ದು, ಅಲ್ಲಿ ಕುಡಿಯುವ ನೀರಿಗಾಗಿ 500 ರಿಂದ 530 ಅಡಿ ಆಳಕ್ಕೆ ಹೋಗಬೇಕಾದಂಥ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆದರೆ ನಮ್ಮ ಈ ಒಂದು ತಾಲ್ಲೂಕನ್ನು ಏಕೆ ಬಿಟ್ಟಿದ್ದೀರಿ, ಕಡೆಗಣಿಸಿದ್ದೀರಿ? ಆದ್ದರಿಂದ ಗೌರಿಬಿದನೂರು ತಾಲ್ಲೂಕು ಜನತೆಯ ಕೂಗನ್ನು ಇಲ್ಲಿ ಹೇಳುವುದಕ್ಕೆ ನಾನು ಇಚ್ಛಿಪಡುತ್ತಿದ್ದೇನೆ. ದಯವಿಟ್ಟು ನನ್ನ ಗೌರಿಬಿದನೂರು ತಾಲ್ಲೂಕನ್ನೂ ಸಹ ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಸೇರಿಸಬೇಕು ಎಂದು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ. ಈ ಕಡೆ ಕೊರಟಗೆರೆ ಸೇರಿದೆ, ಆಕಡೆ ಮಧುಗಿರಿ ಸೇರಿದೆ, ಪಾವಗಡ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರಗಳೂ ಸೇರಿವೆ. ಮಧ್ಯದಲ್ಲಿ ಇರುವಂಥ ಗೌರಿಬಿದನೂರನ್ನು ಮಾತ್ರ ಬಿಟ್ಟಿದ್ದಾರೆ. ಈ ಮಾತನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಬಯಲುಸೀಮೆ ಅಭಿವೃದ್ಧಿ ಮಂಡಳಿ ಸದಸ್ಯತ್ವದಲ್ಲಿ ನಮ್ಮ ಗೌರಿಬಿದನೂರು ತಾಲ್ಲೂಕನ್ನೂ ಕೂಡ ಸೇರಿಸಿಕೊಳ್ಳಬೇಕು. ಆರು ಹೋಬಳಿಗಳನ್ನು ಒಳಗೊಂಡ ನನ್ನ ತಾಲ್ಲೂಕಿನಲ್ಲಿ ಒಂದು ಹೋಬಳಿ ಮಾನ್ಯ ಶ್ರೀರಾಮರೆಡ್ಡಿಯವರಿಗೆ ಸೇರಿದೆ. ಅವರು ಪ್ರಸ್ತಾಪ ಮಾಡುತ್ತಾರೆ ಎಂದು ನಾನು ಆಸೆಪಟ್ಟೆ. ಆದರೆ ಅವರು ಪ್ರಸ್ತಾಪ ಮಾಡಲಿಲ್ಲ. ಅದು ಇನ್ನು ಸ್ವಲ್ಪ ದಿವಸದಲ್ಲೇ ಡೆಸರ್ಟ್ ಆಗತಕ್ಕಂಥ ಪರಿಸ್ಥಿತಿ ಹೊಂದಿದೆ. ದಯವಿಟ್ಟು ಇದನ್ನು ಗಣನೆಗೆ ತೆಗೆದುಕೊಂಡು ಸರ್ಕಾರದವರು ಗೌರಿಬಿದನೂರು ತಾಲ್ಲೂಕನ್ನೂ ಸಹ ಬಯಲುಸೀಮೆ ಮಂಡಲಿಗೆ ಸೇರಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ವೈಸ್ ಚೇರ್ಮನ್ :— ಈಗ ಸಾಕಷ್ಟು ಚರ್ಚೆಯಾಗಿದೆ. ಇನ್ನು ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಬೇಕು. ಮಾನ್ಯ ವೀರಪ್ಪ ಮೊಯಿಲಿಯವರನ್ನು ಈ ಸಂದರ್ಭದಲ್ಲಿ ಅಭಿನಂದಿಸುವುದಕ್ಕೆ

ಇಚ್ಛೆಪಡುತ್ತೇನೆ. ಏಕೆಂದರೆ ಅವರು ಈ ಪ್ರದೇಶದ ಬಗ್ಗೆ ಕಾಳಜಿ ಇಟ್ಟುಕೊಂಡು ಈ ಪ್ರದೇಶದ ಅಭಿವೃದ್ಧಿಯಾಗಬೇಕೆಂದು ಹೇಳಿ ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯ ರಚನೆಯನ್ನು ಮಾಡಿದರು. ಆದರೆ ಈ ಸರ್ಕಾರ ಇದರ ಬಗ್ಗೆ ಏಕೋ ಮಲತಾಯಿ ಧೋರಣೆಯನ್ನು ತಾಳಿದೆ. ಅದು ಏಕೆಂದು ನನಗೆ ಗೊತ್ತಿಲ್ಲ. ಸನ್ಮಾನ್ಯ ಬೈರೇಗೌಡರು ಮೊದಲನೇ ಸಲ ನಮ್ಮನ್ನು ಸಭೆ ಸೇರಿಸಿ ನಮಗೆ ಟಿ.ವಿ. ತೋರಿಸಿ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಹೇಳಿದಾಗ ಆ ಸಂದರ್ಭದಲ್ಲಿ ನಾವೆಲ್ಲರೂ ಬಹಳ ಖುಷಿಪಟ್ಟೆವು, ಏನೋ ನಮ್ಮ ಕ್ಷೇತ್ರದಲ್ಲಿ ಕೆಲಸ ಆಗುತ್ತದೆ ಎಂದು. ಕೆರೆ ಹೂಳನ್ನು ಎತ್ತುತ್ತಾರೆ ಎಂದು ನಾವು ಖುಷಿಯನ್ನು ಪಟ್ಟೆವು. ಇಬ್ಬರು ಮುಖ್ಯಮಂತ್ರಿಗಳನ್ನು ಸಭೆಗೆ ಕರೆಸಿ ಆಶ್ವಾಸನೆಯನ್ನು ಕೊಡಿಸಿದರು. ಆದರೆ ಏನೂ ಪ್ರಯೋಜನ ಆಗಲಿಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತು ಬಹುಶಃ ಹೆಚ್ಚುಮಂದಿ ಶಾಸಕರು ಇದ್ದಿದ್ದರೆ ಚೆನ್ನಾಗಿತ್ತು. ಇವತ್ತು ಬಯಲುಸೀಮೆ ಅಭಿವೃದ್ಧಿ ಮಂಡಲಿ ಬಗ್ಗೆ ಚರ್ಚೆಯಾಗುತ್ತದೆ ಎಂದು ಈ ಪ್ರದೇಶದಿಂದ ಬರತಕ್ಕಂಥ ಹೆಚ್ಚಿನ ಶಾಸಕರಿಗೆ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಬಾಲಕೃಷ್ಣ ಅವರೇ ಒಂದು ನಿಮಿಷ. ಈ ಅಭಿವೃದ್ಧಿ ಮಂಡಲಿ ಆಗಬೇಕು ಎಂದು ಹೇಳಿ ಈ ಕಡೆ ಕುಳಿತುಕೊಂಡು ಹೋರಾಟ ಮಾಡಿದ್ದರ ಮುಖಂಡತ್ವವನ್ನು ಮಾನ್ಯ ಬೈರೇಗೌಡರು ವಹಿಸಿದ್ದರು. ಇವತ್ತು ನೀವು ಮಾನ್ಯ ಮೊಯಿಲಿಯವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೀರಿ. ಈ ಕಡೆ ಕುಳಿತುಕೊಂಡು ಇದು ಆಗಲೇಬೇಕು ಎಂದು ಹೇಳಿದಾಗ ಬೈರೇಗೌಡರು, ನಾವೆಲ್ಲರೂ ಅವತ್ತು ಇಲ್ಲಿ ಇದ್ದೆವು. ಆದ್ದರಿಂದ ನೀವು ಅವರನ್ನು ಏಕೆ ಬಿಡುತ್ತೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ :— ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದು ಇಷ್ಟೆ. ಮೊನ್ನೆ ನಮ್ಮ ಅಭಿವೃದ್ಧಿ ಮಂಡಲಿಯಲ್ಲಿ ಗಲಾಟೆಯಾಯಿತು ಮತ್ತು ಸಭೆ ಆಗಲಿಕ್ಕೇ ಬಿಡಲಿಲ್ಲ. ಏಕೆಂದರೆ ಮಾನ್ಯ ಮುದ್ದಹನುಮೇಗೌಡರು ಹೇಳಿದ ರೀತಿಯಲ್ಲಿ ಬರೇ ಕಾಂಟೆಸ್ಸಾ ಕಾರನ್ನು ಕೊಡಿಸುವುದಕ್ಕೆ ಸಭೆಯ ಅವಶ್ಯಕತೆ ಇಲ್ಲ. ಅದನ್ನು ಅಲ್ಲೇ ತೆಗೆದುಕೊಳ್ಳಬಹುದಾಗಿತ್ತು. ಆದರೆ ನೀವು ಏನೋ ತೆಗೆದುಕೊಂಡುಬಂದು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೀರಿ ಎಂದು ಹೇಳಿ ಬಹಳ ಗಲಾಟೆಯಾಗಿ ಸಭೆ ಗದ್ದಲದಿಂದ ಮುಕ್ತಾಯವಾಯಿತು. ದಯಮಾಡಿ ನಾನು ಸರ್ಕಾರವನ್ನು ಕೇಳುವುದು ಇಷ್ಟೆ. ಇಲ್ಲಿ ಬೇರೆ ಮಂಡಲಿಗಿಂತ ಹೆಚ್ಚಿನ ರೀತಿಯಿಂದ ಕೆಲಸ ಆಗಬೇಕಾಗಿದೆ. ಏಕೆಂದರೆ ಬೇರೆ ಮಂಡಲಿಗಳು ಬಹಳ ವರ್ಷಗಳಿಂದ ಕೆಲಸ ಮಾಡಿಕೊಂಡುಬಂದಿವೆ. ನಮ್ಮದು ಇತ್ತೀಚೆಗೆ ಬಂದಿರುವಂಥ ಅಭಿವೃದ್ಧಿಮಂಡಲಿ ಆದ್ದರಿಂದ ಇದಕ್ಕೆ ಹೆಚ್ಚಿನ ಒತ್ತುಕೊಟ್ಟು ಈ ಭಾಗದ ಅಭಿವೃದ್ಧಿಗೆ ಅನುಕೂಲಮಾಡಿಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

+ ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ,

ಶ್ರೀ ಜೆ.ಸಿ. ಮಾಧುಸ್ವಾಮಿ :— ಉಪ ಮುಖ್ಯಮಂತ್ರಿಯವರ ಬಾಯಲ್ಲಿ ಹೇಳಿಸಿ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :— ಅವರೂ ಮಾತನಾಡುತ್ತಾರೆ. ಬಹಳ ಪ್ರಾಮುಖ್ಯವಾದಂಥ, ವಿಚಾರದಲ್ಲಿ ಏಳು ಜನ ಮಾನ್ಯಸದಸ್ಯರುಗಳು ಭಾಗವಹಿಸಿ ಮಾತನಾಡಿದ್ದಾರೆ. ಈ ಬಯಲುಸೀಮೆ ಅಭಿವೃದ್ಧಿ ಮಂಡಲಿ ವ್ಯಾಪ್ತಿ ನಮ್ಮ ರಾಜ್ಯದ 75 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರತಕ್ಕಂಥಾದ್ದು ಇದೆ. ಈ 75 ಕ್ಷೇತ್ರಗಳಲ್ಲೂ ಸಹ ಮಳೆ ಸಾಮಾನ್ಯವಾಗಿ 18 ರಿಂದ 22 ಅಂಗುಲದಷ್ಟು ಸರಾಸರಿ ಮಳೆಯಾಗುತ್ತದೆ. ಮತ್ತೆ ಶೇಕಡಾ ನೀರಾವರಿ ಎಷ್ಟು ಎಂದು ಲೆಕ್ಕಹಾಕಿದರೂ ಸಹ ಅದು ಎಲ್ಲವೂ ಕೂಡ ಶೇಕಡಾ 30 ಕ್ಕಿಂತ ಕಡಿಮೆ ಈ ಭಾಗದಲ್ಲಿ ನೀರಾವರಿ ಆಗತಕ್ಕದ್ದು. ಅಂದರೆ ಭಾರಿ ನೀರಾವರಿ ಯೋಜನೆಗಳು ಇರತಕ್ಕಂಥಾದ್ದು ಯಾವ ಪ್ರದೇಶದಲ್ಲಿ ಕೂಡ ಇಲ್ಲ. ಸಣ್ಣ ನೀರಾವರಿ ಆಗತಕ್ಕಂಥ ಕೆರೆ, ಕುಂಟೆ ಮುಂತಾದವುಗಳಲ್ಲಿ ನೀರಾವರಿ ಆಗತಕ್ಕಂಥಾದ್ದು ಕೂಡ ಇಷ್ಟು ಕಡಿಮೆ ಇದೆ. ಈ ಭಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಾದರೆ ಸುಮಾರು 107 ಲಕ್ಷ ಹೆಕ್ಟೇರ್ ಪ್ರದೇಶ ಸಾಗುವಳಿಗೆ ಯೋಗ್ಯವಾಗಿದೆ. ಆದರೆ ಇದರಲ್ಲಿ ಈಗ ನೀರಾವರಿ ಆಗತಕ್ಕಂಥಾದ್ದು ಕೂಡ ಕೇವಲ 24 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ. 107 ಹೆಕ್ಟೇರ್ ಪ್ರದೇಶದಲ್ಲಿ 24 ಲಕ್ಷ ಹೆಕ್ಟೇರ್ ಮಾತ್ರ ನೀರಾವರಿ ಆಗುತ್ತಿದೆ. ಇದರಲ್ಲಿ ನಮ್ಮ ಅಂದಾಜು ಪೊಟೆನ್‌ಶಿಯಲ್ ಇರತಕ್ಕಂಥಾದ್ದು ಸುಮಾರು 54 ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ. ಈ ಅಂಕಿಅಂಶಗಳನ್ನು ನಾನು ಏಕೆ ಮಾಡುತ್ತಿದ್ದೇನೆ ಎಂದರೆ, ಈ ಭಾಗದಲ್ಲಿ ಇನ್ನು 50-100 ವರ್ಷಗಳಾದರೂ ಅಥವಾ ಸಾವಿರ ವರ್ಷಗಳಾದರೂ, ಯಾವುದೇ ಭೂಮಿ ಇರುವವರೆಗೆ ಆಗಲಿ ಇಲ್ಲಿ ಯಾವುದೇ ದೊಡ್ಡ ಜಲಾಶಯ ಬರುವುದಕ್ಕೆ ಸಾಧ್ಯತೆ ಇಲ್ಲವೇ ಇಲ್ಲ. ಇಂತಹ ಪ್ರದೇಶವನ್ನು ಅಭಿವೃದ್ಧಿಗೊಳಿಸಬೇಕು ಎನ್ನತಕ್ಕಂಥ ಕಾರಣದಿಂದಲೇ ಈ ಮಂಡಲಿಯನ್ನು ರಚನೆ ಮಾಡಿರತಕ್ಕಂಥಾದ್ದು. ಮಾನ್ಯ ಮಾಧುಸ್ವಾಮಿಯವರು ಹೇಳಿದಹಾಗೆ ನಾವು ಈ ಕಡೆ ಕುಳಿತಿದ್ದ ಸಂದರ್ಭದಲ್ಲಿ ನಾವೆಲ್ಲರೂ ಸಹ ಬಹುಶಃ ಅವತ್ತು ಈ ಮಸೂದೆ ಕಾನೂನು ಆದಾಗ, ಅಧಿವೇಶನದ ಕೊನೆಯ ದಿವಸದಲ್ಲಿ ನಾವೆಲ್ಲರೂ ಕೂಡ ಸೇರಿ, ಮಾನ್ಯ ವೀರಪ್ಪಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆಡಳಿತ ಪಕ್ಷದಿಂದಲೇ ಕೆಲವರಿಂದ ವಿರೋಧ ಬಂತು. ಆಗ ಅವರೂ ಸಹ ಮಾತನಾಡಿ ಇದೆಲ್ಲಾ ಸರಿಪಡಿಸುತ್ತೇನೆ ಎಂದು ಹೇಳಿ ಅವರ ಕಾಲದಲ್ಲಿ ಇದು ಕಾನೂನು ಆಯಿತು. ಇದನ್ನು ಜಾರಿಮಾಡತಕ್ಕಂಥಾದ್ದಕ್ಕೆ ನಮ್ಮ ಕಾಲದಲ್ಲಿ ಆಯಿತು. ನಾನೇ ಇದನ್ನು ಜಾರಿಕೊಟ್ಟೆ. ಆದರೆ ಇವತ್ತು ಈ ಹಣಕಾಸಿನ ಮುಗ್ಗಟ್ಟು ಈ ಮಂಡಳಿಗೆ ಇರತಕ್ಕಂಥಾದ್ದು ನಿಜ. ಮಾನ್ಯ ಸದಸ್ಯರು ಹೇಳಿರತಕ್ಕದ್ದರಲ್ಲಿ ಅತ್ಯಂತ ಕಡಿಮೆ ಹೇಳಿದ್ದಾರೆಂದು ನನ್ನ ಭಾವನೆ. ಏಕೆಂದರೆ ನಾನು ಈ ಭಾಗದಿಂದ ಬಂದಿದ್ದು ಬಹಳ ದೊಡ್ಡ ಆಸೆ ಇಟ್ಟುಕೊಂಡು ಈ ಮಂಡಲಿಯಿಂದ ದೊಡ್ಡ ಸಾಧನೆ

ಮಾಡಬೇಕು ಎನ್ನತಕ್ಕಂಥ ಗುರಿಯನ್ನು ಇಟ್ಟುಕೊಂಡು ಈ ಕಾನೂನನ್ನು ಜಾರಿಕೊಟ್ಟಿರತಕ್ಕಂಥಾದ್ದು. ಆದರೆ ಒಟ್ಟಾರೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನೂ ಸಹ ಗಮನಿಸಬೇಕಾಗುತ್ತದೆ. ಇವತ್ತು ನಾನು ಸ್ವಲ್ಪ ವೇಳೆಯನ್ನು ತೆಗೆದುಕೊಂಡರೆ ಕ್ಷಮಿಸಬೇಕು ಎಂದು ಕೇಳುತ್ತಾ ಇವತ್ತು ನಮ್ಮ ಪಾಲಿನ ನೀರು ಯು.ಕೆ.ಪಿ. ಪ್ರಾಜೆಕ್ಟ್‌ನಲ್ಲಿ ಆಂಧ್ರದ ಪಾಲಾಗದಿರತಕ್ಕಂಥಾದ್ದಕ್ಕೆ ಎರಡು ಸಾವಿರ ಇಸವಿ ಒಳಗಾಗಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕಾಗಿರತಕ್ಕಂಥಾದ್ದು ಮತ್ತು ಈ ಭಾಗಕ್ಕೆ ಬಂದರೆ ಕಾವೇರಿಯಿಂದ ಈಗಾಗಲೇ ತಮಿಳುನಾಡಿಗೆ ಸಾಕಷ್ಟು ನೀರು ಹರಿದುಹೋಗುತ್ತಿದೆ. ನಮ್ಮ ನೀರಿನ ಹಕ್ಕನ್ನು ನಾವು ಸ್ಥಾಪನೆ ಮಾಡಿಕೊಳ್ಳಬೇಕು ಎಂಬುದು ನಮ್ಮ ವಾದ ಇದೆ. ಇದೇ ರೀತಿಯಲ್ಲಿ ವಿದ್ಯುತ್ ಅಭಾವದ ಕಾರಣದಿಂದ ನಾವು ವಿದ್ಯುಚ್ಛಕ್ತಿಗೂ ಕೂಡ ಹೆಚ್ಚಿನ ಹಣ ತೊಡಗಿಸಬೇಕಾದ ಅವಶ್ಯಕತೆ ಇದೆ. ಇಷ್ಟೆಲ್ಲ ಇದ್ದರೂ ಕೂಡ ಈ ಭಾಗಕ್ಕೂ ಕೂಡ ಹೆಚ್ಚಿನ ಆಸ್ಥೆಯನ್ನು ಕೊಡತಕ್ಕಂಥಾದ್ದು ಅಷ್ಟೇ ಅವಶ್ಯಕತೆ ಇದೆ. ಆದರೆ ಯಾವುದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಮಂಡಲಿಯೂ ಹಣಕಾಸಿನ ವಿಚಾರದಲ್ಲಿ ಸೊರಗಿದೆ ಎನ್ನುವುದನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಇವತ್ತು ಕೆಲವು ಅಂಕಿಅಂಶಗಳನ್ನು ಲಿಖಿತ ಹೇಳಿಕೆ ಮೂಲಕ ಕೊಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಚಿತ್ರದುರ್ಗವನ್ನು ಕೇಂದ್ರಸ್ಥಾನವಾಗಿ ಹೊಂದಿರುವ ಬಯಲುಸೀಮೆ ಪ್ರದೇಶ ಅಭಿವೃದ್ಧಿ ಮಂಡಲಿಯು 1995-96ರ ಸಾಲಿನಿಂದ ಕಾರ್ಯಾರಂಭ ಮಾಡಲು ಪ್ರಾರಂಭಿಸಿದೆ. ಈ ಮಂಡಲಿಯ ವ್ಯಾಪ್ತಿಗೆ ಹಿಂದಿನ 8 ಜಿಲ್ಲೆಗಳ 57 ತಾಲ್ಲೂಕುಗಳು ಒಳಪಟ್ಟಿದ್ದು ಇವುಗಳಲ್ಲಿ ಬರುವ 75 ವಿಧಾನಸಭಾ ಕ್ಷೇತ್ರಗಳೂ ಸಹ ಈ ಮಂಡಲಿಯ ವ್ಯಾಪ್ತಿಗೆ ಒಳಪಡುತ್ತವೆ. ಸದರಿ ಮಂಡಲಿ ಕಾರ್ಯಾರಂಭ ಮಾಡಲು ಪ್ರಾರಂಭಿಸಿದ ವರ್ಷದಿಂದ 98-99ನೇ ಸಾಲಿನವರೆಗೆ ದಿನಾಂಕ 31-12-98ವರೆಗೆ ಸರ್ಕಾರವು ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು ಕೆಳಗಡೆ ನೀಡಲಾಗಿದೆ. ಆಯವ್ಯಯದಲ್ಲಿ ಒದಗಿಸಿರುವ ಅನುದಾನ. 95-96ನೇ ಸಾಲಿನಲ್ಲಿ 597 ಲಕ್ಷ ರೂಪಾಯಿ ನಿಗದಿಪಡಿಸಿದ್ದು ಬಿಡುಗಡೆಮಾಡಲಾದ ಅನುದಾನ 372.75 ಲಕ್ಷ ರೂಪಾಯಿಗಳು. ಪ್ರಾರಂಭ ವರ್ಷದಲ್ಲಿ ಕೊನೆ ಅವಧಿಯಲ್ಲಿ ಹಣಬಿಡುಗಡೆ ಮಾಡಿದ್ದೇವೆ. ಆದರೆ ಅದನ್ನು ಖರ್ಚು ಮಾಡುವುದಕ್ಕೆ ಆಗಲಿಲ್ಲ. ಇದೇರೀತಿಯಲ್ಲಿ 96-97 ರಲ್ಲಿ ಆಯವ್ಯಯದಲ್ಲಿ ಒದಗಿಸಿದ ಹಣ 647 ಲಕ್ಷ ರೂಪಾಯಿಗಳು. ಬಿಡುಗಡೆ

4.50 ಪಿ.ಎಂ.

ಮಾಡಲಾದ ಅನುದಾನ 418 ಲಕ್ಷ ರೂಪಾಯಿಗಳು. ಆಡಳಿತ ಮಂಜೂರಾತಿ ನೀಡಿದ ಮೊತ್ತ 555.18 ಲಕ್ಷ ರೂ.ಗಳು ಅನುಷ್ಠಾನವಾದ ಕಾರ್ಯಗಳಿಗೆ ಮಂಡಳಿಯು ಬಿಡುಗಡೆ ಮಾಡಿದ ಅನುದಾನ 483.93, ಲಕ್ಷ ರೂ.ಗಳು ಕೈಗೆತ್ತಿಕೊಳ್ಳಲಾದ ಕೆಲಸಗಳು 328. 1997-98ನೇ ಸಾಲಿನಲ್ಲಿ 740 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು.

ಮತ್ತೆ 590 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆಡಳಿತಾಧಿಕಾರಿಗಳಿಗೆ ನೀಡಲಾದಂಥ ಹಣ 463 ಲಕ್ಷ ರೂಪಾಯಿಗಳು, ಅನುಷ್ಠಾನಾಧಿಕಾರಿಗಳಿಗೆ ಮಂಡಳಿಯು ಬಿಡುಗಡೆ ಮಾಡಿದ ಅನುದಾನ 366.98 ಲಕ್ಷ, 377 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. 1998-99ನೇ ಸಾಲಿನಲ್ಲಿ 850 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿತ್ತು. 637.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿತ್ತು. ಆಡಳಿತ ಮಂಜೂರಾತಿ 410.29 ಲಕ್ಷ ರೂಪಾಯಿಗಳಿಗೆ ನೀಡಲಾಗಿತ್ತು. ಅನುಷ್ಠಾನಾಧಿಕಾರಿಗಳಿಗೆ ಮಂಡಳಿಯು ಬಿಡುಗಡೆ ಮಾಡಿರುವ ಅನುದಾನ 267.19 ಲಕ್ಷ ರೂಪಾಯಿಗಳು. ಒಟ್ಟು 345 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಸದರಿ ಮಂಡಳಿಗೆ 1999-2000 ನೇ ಇಸವಿಗೆ ಅಂದರೆ ಮುಂದೆ ಬರತಕ್ಕ ಆಯವ್ಯಯದಲ್ಲಿ ಈ ರೀತಿಯಾಗಿ ಅನುದಾನವನ್ನು ಮಾನ್ಯ ಹಣಕಾಸಿನ ಮಂತ್ರಿಗಳು ನೀಡಿದ್ದಾರೆ. ಸಾಮಾನ್ಯ ಕಾರ್ಯಕ್ರಮ 850 ಲಕ್ಷ ರೂಪಾಯಿಗಳು. ವಿಶೇಷ ಘಟಕ ಯೋಜನೆ 360 ಲಕ್ಷ ರೂಪಾಯಿಗಳು, ಗಿರಿಜನ ಉಪಯೋಜನೆ 90 ಲಕ್ಷ ರೂಪಾಯಿಗಳು. ಒಟ್ಟು 1300 ಲಕ್ಷ ರೂಪಾಯಿಗಳನ್ನು ಬರತಕ್ಕ ಆಯವ್ಯಯದಲ್ಲಿ ಒದಗಿಸಿದ್ದಾರೆ. ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನವನ್ನು ಬಳಸಿಕೊಂಡು ಮಂಡಳಿಯು ತನ್ನ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಂಡಳಿಯ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತದೆ. ಈ ರೀತಿಯಾಗಿ ಸೂಕ್ಷ್ಮವಾಗಿ ಈ ಮಂಡಳಿಯ ಕಾರ್ಯಕ್ರಮವನ್ನು ನಾನು ನೀಡುತ್ತಾ, ಇವತ್ತು ಕೆಲವು ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಮತ್ತೆ ಕೆಲವು ಸದಸ್ಯರು ಬಹಳ ಸಿಟ್ಟಿನಿಂದ ಕೂಡ ಮಾತನಾಡಿದ್ದಾರೆ. ಅವೆಲ್ಲವನ್ನೂ ನಾವು ಅರ್ಥ ಮಾಡಿಕೊಂಡಿದ್ದೇವೆ. ಬರತಕ್ಕಂಥ ವರ್ಷದಲ್ಲಿ 13 ಕೋಟಿ ರೂಪಾಯಿಗಳನ್ನು ನಾವೇನು ಒದಗಿಸಿದ್ದೇವೆ, ಅದರ ಜೊತೆಗೆ ಇನ್ನೂ 7 ಕೋಟಿ ರೂಪಾಯಿಗಳನ್ನು ಅಂದರೆ...

ಶ್ರೀ ಕೆ.ಎಸ್. ಬೀಳಗಿ :— ಬಯಲುಸೀಮೆ ಹಣದಲ್ಲಿ 8 ಕೋಟಿ ರೂಪಾಯಿಗಳು ಎಸ್.ಸಿ.ಪಿಗೆ ಹೋಗುತ್ತದೆ....

ಶ್ರೀ ಸಿ. ಭೈರೇಗೌಡ :— ಎಲ್ಲಾ ಲೆಕ್ಕ ಶೀರ್ಷಿಕೆಯಲ್ಲೂ ಈ ಹಣವನ್ನು ನಾವು ಕಳೆಯಬೇಕಾಗುತ್ತದೆ. ಅದು ನಿಜ, ನೀವು ಹೇಳುವುದನ್ನೂ ಹೇಳುತ್ತೇನೆ. ನಾವು ಒಪ್ಪಿಕೊಂಡಿರತಕ್ಕ ನೀತಿ, ಅದನ್ನು ಕಡಿಮೆ ಮಾಡುವುದಕ್ಕೂ ಆಗುವುದಿಲ್ಲ. ನಮ್ಮ ನಿಯಮದ ಪ್ರಕಾರ ಅದನ್ನು ಕೊಡಲೇಬೇಕಾಗುತ್ತದೆ. ಅದೆಲ್ಲವನ್ನೂ ಕೇಂದ್ರೀಕರಿಸಿ ನಾವು ಬೇರೆ ಬೇರೆ ಕಾರ್ಯಕ್ರಮಗಳಿಗೆ ಬಳಸತಕ್ಕಂತಾದ್ದು ಉಂಟು. ಆ ಹಣವನ್ನು ನಾವು ಖರ್ಚು ಮಾಡಲೇಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು, ಈ ಪೂರಕ ಬೇಡಿಕೆಗಳಲ್ಲಿ ಬರತಕ್ಕಂಥ ವರ್ಷದಲ್ಲಿ 7 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ನೀಡುವುದಾಗಿ ಭರವಸೆಯನ್ನು ಕೊಟ್ಟಿರುತ್ತಾರೆ. ಮಾನ್ಯ ಸದಸ್ಯರು ಹೇಳಿರತಕ್ಕಂಥ ಅಭಿಪ್ರಾಯಗಳನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಅರ್ಥಮಾಡಿಕೊಂಡಿದ್ದಾರೆ. ಅವರ

ಒತ್ತಾಯಕ್ಕೆ, ಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆ ಭಾಗದಿಂದ ಬಂದಿರುವವರಲ್ಲಿ ನಾನೂ ಸಹ ಒಬ್ಬ ಸದಸ್ಯನಾಗಿರುವುದರಿಂದ 7 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಅನುದಾನವಾಗಿ ಕೊಡುತ್ತೇನೆಂದು ಭರವಸೆ ಕೊಟ್ಟಿರುವುದರಿಂದ, ಮಾನ್ಯ ಅರ್ಥಮಂತ್ರಿಗಳಿಗೆ ನನ್ನ ಪರವಾಗಿಯೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಮಂಡಳಿಗೆ ಇನ್ನೂ ಅವಶ್ಯಕತೆ ಇದೆ, ಇಲ್ಲ ಎಂದು ನಾನು ಹೇಳುತ್ತಾ ಇಲ್ಲ.

-ಗೊಂದಲ-

ಶ್ರೀ ಜೆ.ಸಿ. ಮಾಧುಸ್ವಾಮಿ :— ಎಸ್.ಸಿ.ಪಿ ಮತ್ತು ಟಿಎಸ್‌ಪಿ ಬಿಟ್ಟು 20 ಕೋಟಿ ರೂ. ಕೊಡಬೇಕು.

-ಗೊಂದಲ-

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ದಯವಿಟ್ಟು ಈ ವಿಚಾರವಾಗಿ ಮಾನ್ಯ ಸಿದ್ಧರಾಮಯ್ಯನವರು ಉತ್ತರ ಕೊಡಬೇಕು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) :— ಮಾನ್ಯ ಬೈರೇಗೌಡರು ಆ ಭಾಗದಿಂದ ಬಂದಂಥವರು ಮತ್ತು ಮಾನ್ಯ ಕೃಷಿ ಸಚಿವರು. ಇದರ ಬಗ್ಗೆ ಹೆಚ್ಚು ಆಸಕ್ತಿ ಇಟ್ಟುಕೊಂಡು, ಆ ಭಾಗದಲ್ಲಿ ಹೆಚ್ಚು ಅಭಿವೃದ್ಧಿಪಡಿಸಬೇಕು ಎಂಬ ಕಾಳಜಿಯನ್ನು ಏನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಆ ಕಾಳಜಿಯನ್ನು ಅವರೂ ಕೂಡ ಇಟ್ಟುಕೊಂಡಿದ್ದಾರೆ ಮತ್ತು ನಮಗೂ ಆ ಬಗ್ಗೆ ಎಲ್ಲಿ ನೀರಾವರಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ, ಮಳೆ ಆಶ್ರಯದಲ್ಲಿ ವ್ಯವಸಾಯ ಮಾಡಬೇಕಾಗಿದೆ ಮತ್ತು ಕೆರೆಗಳ ಮೂಲಕ ಸಣ್ಣ ನೀರಾವರಿ ವ್ಯವಸಾಯ ಮಾಡಬೇಕಾಗಿದೆ, ಈ ಪ್ರದೇಶಗಳ ಅಭಿವೃದ್ಧಿ ಮಾಡಬೇಕೆಂಬುದರ ಬಗ್ಗೆ ಎರಡನೇ ಮಾತಿಲ್ಲ. ಏಕೆಂದರೆ, ಆ ಭಾಗದ ಜನರ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಕೂಡ ಸುಧಾರಣೆಯಾಗಬೇಕಾಗುತ್ತದೆ. ಆದರೆ, ಇರತಕ್ಕಂಥ ನಮ್ಮ ಸಂಪನ್ಮೂಲಗಳ ಇತಿಮಿತಿಯೊಳಗಡೆ ಯಾವುದಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಕೆಲಸ ಮಾಡಬೇಕೆಂಬುದನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ನೀರಾವರಿ, ವಿದ್ಯುತ್, ಪ್ರಾಥಮಿಕ ಶಿಕ್ಷಣ ಹೀಗೆ, ಇವುಗಳಿಗೂ ಕೊಡಬೇಕೆಂಬುದಕ್ಕೆ ಯಾವುದೇ ಸದಸ್ಯರು ಭಿನ್ನಾಭಿಪ್ರಾಯವನ್ನು ಇಟ್ಟುಕೊಂಡಿಲ್ಲ. ಇದರ ಜೊತೆಗೆ ನಿಮ್ಮ ಭಾಗದ ಕೆಲಸ ಕೂಡ ಆಗಬೇಕು, ಅದಕ್ಕೆ ಹೆಚ್ಚು ಹಣ ಒದಗಿಸಬೇಕು ಈ ನಿಮ್ಮ ಬೇಡಿಕೆ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಮತ್ತು ಹೆಚ್ಚು ಹಣ ಕೊಡಬಾರದು ಎಂದು ಹೇಳತಕ್ಕಂಥವನು ನಾನಲ್ಲ. ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಹಣ ಒದಗಿಸಬೇಕಾಗುತ್ತದೆ. ಹಿಂದೆ, ಇದೇ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ 7 ಕೋಟಿ 40 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಇದನ್ನು ಇನ್ನೂ ಹೆಚ್ಚಿಸಬೇಕೆಂಬ ವಾದವನ್ನು ಆ ಭಾಗದಿಂದ ಬಂದ ಎಲ್ಲಾ ಮಾನ್ಯ ಸದ್ಯಸರು ಪ್ರಸ್ತಾಪ ಮಾಡಿ, ಒತ್ತಾಯ ಮಾಡಿದರು ಮತ್ತು ಧರಣಿಯನ್ನು ಕೂಡ ಮಾಡಿದ್ದಾರೆ. ಆವತ್ತು ನಾನು ಏನು ಹೇಳಿದ್ದೆ. ಸಾಧ್ಯವಾದ ಮಟ್ಟಿಗೆ ಹೆಚ್ಚು ಮಾಡೋಣವೆಂದು

ಹೇಳಿದ್ದೇನೆ. ನಾನು ಇಷ್ಟೇ ಹೆಚ್ಚು ಮಾಡುತ್ತೇನೆಂದು ಹೇಳಿರಲಿಲ್ಲ. 1998-99ರಲ್ಲಿ ನಾವು 13 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟರೂ ಕೂಡ, ಅದರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಹಣ ಕ್ರೋಢೀಕರಣ ಮಾಡಲಾಗುತ್ತದೆ. ಎಲ್ಲಾ ಕಾರ್ಯಕ್ರಮಗಳಲ್ಲೂ ಇದಕ್ಕೆ ತೆಗೆದುಕೊಳ್ಳುತ್ತಾರೆ. ಹಾಗೆಯೇ ಇದರಲ್ಲೂ ಕೂಡ ಎಸ್‌ಸಿಪಿಗೆ ಮತ್ತು ಟಿಎಸ್‌ಪಿಗೆ ತೆಗೆದುಕೊಳ್ಳುತ್ತಾರೆ. ಹಾಗಾಗಿ, 13 ಕೋಟಿ ರೂ.ಗಳು ಇಟ್ಟರೂ ಕೂಡ, ಇದಕ್ಕೋಸ್ಕರವೇ ಅಷ್ಟೂ ಹಣ ಖರ್ಚಾಗುವುದಿಲ್ಲ. ಎಸ್‌ಸಿ ಮತ್ತು ಎಸ್‌ಟಿ ಯವರಿಗೆ ಪೂಲ್ ಮಾಡಿದಂಥ ಹಣ, ಆ ವರ್ಗದ ಜನರಿಗೆ ಖರ್ಚಾಗುತ್ತದೆ. ಇಲ್ಲಿಯೂ ಕೂಡ ಆ ವರ್ಗದ ಜನ ಇರುತ್ತಾರೆ. ಈ ಪ್ರದೇಶದಲ್ಲೂ ಕೂಡ ಎಸ್‌ಸಿ ಎಸ್‌ಟಿ ಜನಗಳು ಇರುತ್ತಾರೆ. ಇಲ್ಲಿಟ್ಟಿರತಕ್ಕ ಹಣದಲ್ಲಿ ತೆಗೆದು, ಇವರ ಅಭಿವೃದ್ಧಿಗೋಸ್ಕರವೇ ಖರ್ಚು ಮಾಡುವಂತಾದ್ದು. ಇದು ಒಂದೇ ಕಾರ್ಯಕ್ರಮದಲ್ಲಿ ಅಲ್ಲ. ಎಲ್ಲಾ ಕಾರ್ಯಕ್ರಮಗಳಲ್ಲೂ ಪೂಲ್ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದೇವೆ. ಎಲ್ಲಾ ಮಾನ್ಯ ಸದಸ್ಯರಿಗೂ ಇದು ತಿಳಿದಿರತಕ್ಕ ವಿಚಾರ. ಈಗಾಗಲೇ ಬೈರೇಗೌಡರು ಸರ್ಕಾರದ ಪರವಾಗಿ ಹೇಳಿದ್ದಾರೆ. 1999-2000ನೇ ಇಸವಿಗೆ ಈ 13 ಕೋಟಿ ಜೊತೆಗೆ, ಇನ್ನೂ 7 ಕೋಟಿ ರೂಪಾಯಿಗಳನ್ನು ಹೆಚ್ಚು ಮಾಡಿಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ನಾನೂ ಕೂಡ ಅವರು ಹೇಳಿರತಕ್ಕ ಮಾತನ್ನು ಅನುಮೋದನೆ ಮಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ :— ಆ ಎರಡೂ ಯೋಜನೆ ಬಿಟ್ಟು 20 ಕೋಟಿ ಕೊಡಬೇಕು.

ಮಾನ್ಯ ಸದಸ್ಯರು :— ದಯಮಾಡಿ ಇನ್ನು 5 ಕೋಟಿ ರೂ. ಜಾಸ್ತಿ ಮಾಡಿ ಸ್ವಾಮಿ. ತಾವು 25 ಕೋಟಿ ರೂ. ಕೊಡಲೇಬೇಕು.

ಶ್ರೀ ಸಿದ್ಧರಾಮಯ್ಯ :— ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಹಣವನ್ನು ತೆಗೆಯಲೇಬೇಕಾಗುತ್ತದೆ. ನಾನು ಸುಮ್ಮನೆ ಇಲ್ಲಿ ಭರವಸೆ ಕೊಡುವುದು, ನಂತರ ಭರವಸೆಯಿಂದ ಹಿಂದಕ್ಕೆ ಹೋಗುವುದು, ಅದು ಆಗುವುದಿಲ್ಲ. ಇದರ ಜೊತೆಗೆ ನಾನು ಏನು ಹೇಳುತ್ತೇನೆಂದರೆ, ಆ ಮಂಡಳಿ ಇನ್ನೂ ಹೆಚ್ಚು ಎಫೆಕ್ಟೀವ್ ಆಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಕೂಡ ಮಾಡಬೇಕು. ಅದರಲ್ಲಿ ಏನೇನು ತೊಂದರೆಗಳಿವೆ, ಅವುಗಳನ್ನೆಲ್ಲಾ ನಿವಾರಣೆ ಮಾಡಿಕೊಡಬೇಕು. ಅಲ್ಲಿ ಕೆಲಸ ಮಾಡತಕ್ಕಂಥ ಸೆಕ್ರೆಟರಿ ಇಲ್ಲ. ಅದಕ್ಕೆ ಒಬ್ಬ ಸೆಕ್ರೆಟರಿಯವರನ್ನು ನೇಮಕ ಮಾಡುವಂತಾದ್ದು ಆಗಬೇಕು. ಮಾನ್ಯ ಮೊಯ್ಲಿಯವರು ಹೇಳಿದಂತೆ, ಈ ಕಾರ್ಯಕ್ರಮಗಳ ವಿಚಾರದಲ್ಲಿ ಕೇಂದ್ರ ಸರ್ಕಾರದವರ ಜೊತೆಯಲ್ಲಿ ಮಾತನಾಡಿ ಅಲ್ಲಿಂದ ಬರತಕ್ಕ ಹಣವನ್ನೂ ಇದರ ಜೊತೆಗೆ ಸೇರಿಸೋಣ. ಮತ್ತು ಎಷ್ಟು ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೋ ಅದನ್ನು ಮಾಡೋಣ. ನಾವು ಮಾತನಾಡುತ್ತೇವೆ ಮತ್ತು ಮಾನ್ಯ ಬೈರೇಗೌಡರೂ ಹೋದಾಗ ಸಂಬಂಧಪಟ್ಟ

ಇಲಾಖೆಯ ಮಂತ್ರಿಯವರ ಜೊತೆಗೆ ಮಾತನಾಡಿ, ಇದಕ್ಕೆ ಇನ್ನೂ ಹೆಚ್ಚು ಹಣ ಕೊಡುವುದಕ್ಕೆ ಪ್ರಯತ್ನ ಮಾಡೋಣ. ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ಏಕೆಂದರೆ, ನಾವೂ ಕೂಡ ಅಂತಹ ಪ್ರದೇಶದಿಂದಲೇ ಬಂದಿರುತ್ತೇವೆ. ಅದು ಎಲ್ಲೋ ಸ್ವಲ್ಪ ನೀರಾವರಿ ಇರುವುದರಿಂದ ಬಿಟ್ಟುಬಿಟ್ಟಿದ್ದಾರೆ. ಅದು ಏನೇ ಇರಲಿ ಅದರ ಬಗ್ಗೆ ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಸಹ ಅಂಥಾದ್ದೇ ಪ್ರದೇಶದಿಂದ ಬಂದಿರುವುದರಿಂದ ಅಲ್ಲಿನ ಜನರ ಸಮಸ್ಯೆಗಳು, ಆ ಭಾಗದ ಸಮಸ್ಯೆಗಳು ಗೊತ್ತಿದ್ದೂ ಕೂಡ..

ಶ್ರೀ ಜೆ.ಸಿ. ಮಾಧುಸ್ವಾಮಿ :— ಯಾವ ಪಕ್ಷದ ಸರ್ಕಾರ ಬಂದರೂ ಸಹ ಸ್ಟೇಟ್ ಫೈನಾನ್ಸ್ ನಿಮ್ಮ ಕೈಯಲ್ಲಿಯೇ ಇರುತ್ತದೆಯಲ್ಲಾ.

ಶ್ರೀ ಸಿದ್ಧರಾಮಯ್ಯ :— ರಾಜಶೇಖರ ಮೂರ್ತಿಯವರು 11 ತಿಂಗಳು ಇದ್ದರು, ಅದು ಆದ ಮೇಲೆ ನಾನೇ ಇದ್ದದ್ದು. ಅದಕ್ಕಿಂತ ಹಿಂದೆ ಯಾರೂ ಫೈನಾನ್ಸ್ ಮಿನಿಸ್ಟರ್ ಇರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇಲ್ಲ ಸಾರ್ ಇನ್ನೊಂದು 3 ಕೋಟಿ ರೂ. ಜಾಸ್ತಿ ಮಾಡಲೇಬೇಕು.

ಶ್ರೀ ಸಿದ್ಧರಾಮಯ್ಯ :— ಯಾರೇ ಹಣಕಾಸಿನ ಮಂತ್ರಿಗಳಾಗಿದ್ದರೂ ಸಹ ತಾರತಮ್ಯ ಮಾಡುವುದಕ್ಕೆ ಆಗುವುದಿಲ್ಲ. ಹಣಕಾಸಿನ ಮಂತ್ರಿಗಳು ಡಿಸ್‌ಕ್ರಿಷನರಿ ಹಣ ಎಂದು ಇಟ್ಟುಕೊಂಡಿರುವುದಿಲ್ಲ. ಇಲ್ಲಿ ತಾವುಗಳು ಶಾಸಕ ಸಭೆಯಲ್ಲಿ ಎನು ಹಣ ಮಂಜೂರು ಮಾಡಿ ಕೊಡುತ್ತೀರಿ ಬೇರೆ ಬೇರೆ ಬಾಬುಗಳಿಗೆ ಏನು ಹಣ ಮಂಜೂರು ಮಾಡಿ ಕೊಡುತ್ತೀರಿ ಅದರಂತೆ ನಾವು ಹಣ ಖರ್ಚು ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಎಸ್‌ಸಿಪಿ ಮತ್ತು ಟಿಎಸ್‌ಪಿ ಬಿಟ್ಟು 20 ಕೋಟಿ ರೂಪಾಯಿಗಳಾದರೂ ನಮಗೆ ತಾವು ಕೊಡಬೇಕು.

ಶ್ರೀ ಸಿದ್ಧರಾಮಯ್ಯ :— ಮಾನ್ಯ ಸದಸ್ಯರು ದಯಮಾಡಿ ಈ ಸಾರಿ 1999 ಮತ್ತು 2000 ಇಸವಿಗೆ ಸರ್ಕಾರದಿಂದ 20 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಆ ಎರಡು ಸ್ಕೀಮ್ ಬಿಟ್ಟು.

ಶ್ರೀ ಸಿದ್ಧರಾಮಯ್ಯ :— ಕೇಂದ್ರ ಸರ್ಕಾರದಿಂದ ಏನಾದರೂ ಹಣ ಬಂದರೆ ಆ ಹಣವನ್ನು ಸಹ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಹೆಚ್.ಜಿ. ಬಾಲಕೃಷ್ಣ, ಹಾಗೂ ಇನ್ನಿತರೆ ಮಾನ್ಯ ಸದಸ್ಯರು ಧರಣಿ ಮಾಡಿದರು)

ಶ್ರೀ ವಿ. ಮುನಿಯಪ್ಪ :— ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ತೆಗೆದುಕೊಳ್ಳಬೇಕೆಂದು ನಾವು ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟಿದ್ದೇವೆ. ಕೃಷಿ ಇಲಾಖೆಯಿಂದ ಈ ಹಣವನ್ನು ತೆಗೆದು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿ ಕಳುಹಿಸಿದ್ದೇವೆ. ಮಂಡಲಿಯಲ್ಲಿ ತೀರ್ಮಾನ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೇವೆ. ಮಂಡಲಿಯಲ್ಲಿ ತೀರ್ಮಾನ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.

ಶ್ರೀ ಸಿದ್ಧರಾಮಯ್ಯ :— ಈಗ ಕೃಷಿ ಇಲಾಖೆಯ ಅಡಿಯಲ್ಲಿದೆ. ಕೃಷಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಅದು ಅಲ್ಲಿಯೇ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ :— ಮಾನ್ಯ ಮುನಿಯಪ್ಪನವರು ಹೇಳುವುದರಲ್ಲಿ ಸ್ವಲ್ಪ ಅರ್ಥ ಇದೆ. ತಾವು ಹಣಕಾಸಿನ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು. ತಾವು ಕೃಷಿ ಇಲಾಖೆಯಲ್ಲಿ ನಿರ್ವಹಣೆಗೆ ಇಡಿ. ಆದರೆ ಏನಾಗುತ್ತದೆ ಅಂದರೆ ನಾನೂ ಕೂಡ ತಮ್ಮ ಆಲೋಕೇಷನ್ ಅನ್ನು ಅಬ್ಸರ್ವ್ ಮಾಡಿದಾಗ ಅದು ಏನಾಗಿದೆ ಅಂದರೆ ಕೃಷಿ ಇಲಾಖೆಯ ಸೆಕ್ಟಾರ್‌ನಲ್ಲಿಯೇ ಅದು ಬರುತ್ತದೆ. ಇದರಿಂದ ನಿಮಗೆ ಹೆಚ್ಚು ಹಣ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿ ಮತ್ತು ಹೈದ್ರಾಬಾದ್ ಅಭಿವೃದ್ಧಿ ಮಂಡಲಿಯಲ್ಲಿ ಅದಕ್ಕೆ ಸಪರೇಟ್ ಆಗಿ ಆಲೋಕೇಷನ್ ಇರುವುದರಿಂದ ತಾವು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಹೆಚ್ಚುವರಿಯಾಗಿ ಕೊಡುವುದಕ್ಕೆ ಆಗುತ್ತದೆ. ಆದರೆ ಇದು ಕೃಷಿ ಇಲಾಖೆಯಲ್ಲಿಯೇ ಬರುವುದರಿಂದ ನಿರ್ವಹಣೆಗೆ ಕೃಷಿ ಇಲಾಖೆಗೆ ಬಿಟ್ಟುಬಿಡಿ. ಆದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಇದಕ್ಕೆ ಪ್ರತ್ಯೇಕವಾದ ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿರುವಂತೆ ಈ ಮಂಡಲಿಯಲ್ಲಿಯೂ ಅದರ ಕಾರ್ಯಕ್ರಮಗಳಿಗೆ ಸೀಮಿತಗೊಂಡು ನಿರ್ವಹಣೆಗೆ ಕೃಷಿ ಇಲಾಖೆಗೆ ಬಿಟ್ಟು ಇಲ್ಲದಿದ್ದರೆ ಏನಾಗುತ್ತದೆ ಅಂದರೆ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಕೃಷಿ ಇಲಾಖೆಯವರು ಚರ್ಚೆಗೆ ಹೋಗುವಾಗ ಬೇರೆ ಎಲ್ಲಾ ಒಂದು ಆದ್ಯತೆಯ ಕ್ಷೇತ್ರವನ್ನು ನೋಡುವಾಗ ಏನಾಗುತ್ತದೆ ಅಂದರೆ ಕೃಷಿ ಇಲಾಖೆಯಲ್ಲಿಯೇ ಈ ಬಡತನ ಹಂಚಿಕೊಂಡಂತೆ ಕೃಷಿ ಇಲಾಖೆಯ ಹಣವನ್ನು ಹಂಚಿಕೊಂಡಂತೆ ಆಗುತ್ತದೆ. ಅದು ಅವರು ಹೇಳುವ ಪಾಯಿಂಟ್ ಇದನ್ನು ಕನ್ಸಿಡರ್ ಮಾಡಿ. ಈಗ ನಾನು ಒಂದು ಆರ್ಟಿಕಲ್ ಓದಿದೆ. ಅದು ಏನೆಂದರೆ ಅತಿವೃಷ್ಟಿಗಿಂತಲೂ ಕೂಡ ಅನಾವೃಷ್ಟಿ ಈ ದೇಶವನ್ನು ಹೆಚ್ಚು ಬಾಧಿಸುವಂತಹ ಒಂದು ವಿಚಾರ. ಮಲೆನಾಡು ಅಭಿವೃದ್ಧಿಮಂಡಲಿ ಇರುವಂತಾದ್ದು ಅತಿವೃಷ್ಟಿ ಬಂದರೂ ಕೂಡ ಜನ ಸುಧಾರಿಸಿಕೊಳ್ಳಬಹುದು, ಪುನಃ ಅದನ್ನು ನಿರ್ಮಾಣ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ, ಆದರೆ ಅನಾವೃಷ್ಟಿಯ ಸ್ಥಳಗಳು ಏನು ಇದೆ

ಅನಾವೃಷ್ಟಿಯ ಪ್ರದೇಶಗಳನ್ನು ಒಂದು ರೀತಿಯಲ್ಲಿ ಅದು ಕ್ಯಾನ್ಸರ್ ಇದ್ದಂತೆ. ಆ ಪ್ರದೇಶ, ಆದ್ದರಿಂದ ಅತ್ಯಂತ ಕನಿಷ್ಟ ಪರಿಸ್ಥಿತಿಯಲ್ಲಿರತಕ್ಕಂಥ ಜನ ಯಾರು ಅಂದರೆ ಅನಾವೃಷ್ಟಿಯಲ್ಲಿರತಕ್ಕಂಥ ಜನ. ಆ ದೃಷ್ಟಿಯಿಂದಲೇ ತಾವು ವಿಚಾರ ಮಾಡಬೇಕು. ಏಕೆಂದರೆ ಮುಂದೆ ಆಲೋಚನೆ ಮಾಡಿ. ಈಗಾಗಲೇ ನಾವು ಅವರು ಏನು ಹೇಳುತ್ತಾರೆ ಅಂದರೆ 3 ಕೋಟಿಯನ್ನು ತಾವು ಟಿಎಸ್‌ಪಿ ಮತ್ತು ಎಸ್‌ಸಿಪಿಗೆ ಏನು ಕೊಡುತ್ತೀರಿ ಆ ಹಣ ಆಯಾಯ ವರ್ಷದ ಬಜೆಟ್‌ನಲ್ಲಿ ತಾವು ಏನು ಹಣ ಇಡುತ್ತೀರಿ ಆ ಹಣ ಖರ್ಚಾಗುತ್ತಿಲ್ಲ. ಏಕೆಂದರೆ ಅದು ಎಸ್‌ಸಿಪಿ ಎಂದು ಹೇಳಿ ಒಂದು ವರ್ಷ ಹೋಗಬಹುದು. ಎರಡು ವರ್ಷ ಹೋಗಬಹುದು ಯೋಜನಾ ಕರ್ತರು ಏನು ಮಾಡುತ್ತಾರೆ ಅಂದರೆ ಬಿಡುಗಡೆಗೆ ಕೊನೆಯ ಪ್ರಾಶಸ್ತ್ಯ ಕೊಡುತ್ತಾರೆ. ಆದ್ದರಿಂದ ತಾವು ಈ 3 ಕೋಟಿಯನ್ನು ಇದಕ್ಕಾಗಿ ಹೆಚ್ಚು ಕೊಡಿ ಅವರ ಬೇಡಿಕೆ ಅಷ್ಟೇ. ಅದು ಬಹಳ ಸಾಧುವಾಗಿದೆ. ತಾವು ಆ 3 ಕೋಟಿಯನ್ನು ಅವರಿಗೆ ಕೊಡಿ. ಅವರು ಟಿಎಸ್‌ಪಿ ಮತ್ತು ಎಸ್‌ಸಿಪಿಯಲ್ಲಿಯೇ ಆ ಹಣ ಖರ್ಚು ಮಾಡಲಿ. ಕನಿಷ್ಟಪಕ್ಷ ಈ ವರ್ಷವಾದರೂ ನಾವು ಆ ಸ್ವಾತಂತ್ರ್ಯವನ್ನು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಕೊಟ್ಟರೆ ಈ ವರ್ಷ ಮತ್ತು ಬರುವ ವರ್ಷ ಕೊಟ್ಟರೆ ಖಂಡಿತವಾಗಿ ಆ ಹಣ ಖರ್ಚಾಗುತ್ತದೆ. ಇಲ್ಲದಿದ್ದರೆ ಅದು ಖರ್ಚಾಗತಕ್ಕಂಥ ವ್ಯವಸ್ಥೆ ಇಲ್ಲ. ದಯಮಾಡಿ ಆ ಎಸ್‌ಸಿಪಿಯಲ್ಲಿರತಕ್ಕಂಥ ಹಣವನ್ನು ತೆಗೆದಿರಿಸಿ ಅವರಿಗೆ ಖರ್ಚು ಮಾಡತಕ್ಕಂಥ ಒಂದು ಆಶ್ವಾಸನೆಯನ್ನು ಕೊಟ್ಟರೆ ಬಹುಶಃ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಸಿದ್ದರಾಮಯ್ಯ :— ತಾವು ಕೊಟ್ಟಿರತಕ್ಕಂಥ ಸಲಹೆ ಏನು ಇದೆ ಅದನ್ನು ನಾನು ಮತ್ತು ಮಾನ್ಯ ಕೃಷಿ ಸಚಿವರು ಕುಳಿತುಕೊಂಡು ಮಾತನಾಡಿ ಅದರ ಬಗ್ಗೆ ಒಂದು ತೀರ್ಮಾನ ಮಾಡುತ್ತೇವೆ. ತಾವು ದಯಮಾಡಿ ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ.

ಶ್ರೀ ಸಿ. ಭೈರೇಗೌಡ :— ನಾವು ಅದನ್ನು ತೆರೆಯಲೇಬೇಕಾಗುತ್ತದೆ. ಅದನ್ನು ಮೀರುವುದಕ್ಕೆ ಸಾಧ್ಯವಿಲ್ಲ. ಆದರೆ ಒಂದು ನಾವು ಏನು ಪರಿಗಣಿಸಬಹುದು ಅಂದರೆ ವು ಈ ಬಾಬಿಗೋಸ್ಕರ ಮೀಸಲಾಗಿಟ್ಟಿರತಕ್ಕಂಥ ಹಣವನ್ನು ಈ ಭಾಗದಲ್ಲಿಯೇ ಖರ್ಚಿ ಮಾಡುವುದಕ್ಕೆ ವ್ಯವಸ್ಥೆ ಮಾಡೋಣ ಈಗ ಹಣವನ್ನು ಪೂಲ್ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :— ಈ ವರ್ಷದ ಬಜೆಟ್‌ನಲ್ಲಿ ನಾವು ಎಸ್‌ಸಿಪಿ ಮತ್ತು ಟಿಎಸ್‌ಪಿಗೆ 91 ಕೋಟಿ ರೂಪಾಯಿಗಳನ್ನು ಪೂಲ್ ಮಾಡಿದ್ದೇವೆ. ಇಲ್ಲಿ ಏನು ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಏನು ಹಣ ತೆಗೆಯುತ್ತೇವೆ ಆ ಹಣವನ್ನು ಈ ಭಾಗದಲ್ಲಿಯೇ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ :— ಯಾವ ಯಾವ ತಾಲ್ಲೂಕು ಸೇರಬೇಕೆಂದು ಆಕ್ಟ್‌ನಲ್ಲಿಯೇ ಸೇರಿದೆ. ಈಗ ಬೇರೆ ತಾಲ್ಲೂಕು ಸೇರಬೇಕಾದರೆ ಮೂಲ ಕಾನೂನು ತಿದ್ದುಪಡಿಯಾಗಬೇಕಾಗುತ್ತದೆ.

ಆ ಮೂಲ ಕಾನೂನು ತಿದ್ದುಪಡಿ ಮಾಡಬೇಕಾದರೆ ಎರಡೂ ಸದನಗಳ ಒಪ್ಪಿಗೆ ಪಡೆಯಬೇಕಾಗುತ್ತದೆ. ಆ ಕಾರಣದಿಂದ ತಡವಾಗುತ್ತಿದೆ. ತಿದ್ದುಪಡಿ ಮಾಡತಕ್ಕಂಥ ಸಂದರ್ಭದಲ್ಲಿ ಮುಂದೆ ನೋಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಗೌರಿಬಿದನೂರು ತಾಲ್ಲೂಕು ಸೇರಬೇಕೆನ್ನುವುದು ದೊಡ್ಡ ತಿದ್ದುಪಡಿ ಏನೂ ಅಲ್ಲವಲ್ಲಾ. ಈ ಸದನದಲ್ಲಿಯೇ ತನ್ನಿ.

ಶ್ರೀ ಸಿದ್ದರಾಮಯ್ಯ :— ಸಚಿವ ಸಂಪುಟದ ಒಪ್ಪಿಗೆ ಪಡೆದು ಮಾಡಬೇಕಾಗುತ್ತದೆ.

ಶ್ರೀ ಸಿ. ಭೈರೇಗೌಡ :— ಅದು ನನಗೆ ಬರುವುದಿಲ್ಲ. ಅದಕ್ಕೆ ಪ್ರತ್ಯೇಕವಾಗಿ ಒಬ್ಬ ಮಂತ್ರಿಗಳು ಇದ್ದಾರೆ. ಕಾಡಾ ಮಂತ್ರಿಗಳು ಇದ್ದಾರೆ. ಅದು ನನ್ನ ಕೈಯಲ್ಲಿ ಇಲ್ಲ ಅವರ ಕೈಯಲ್ಲಿರುವುದು.

ಶ್ರೀ ಹೆಚ್.ಜಿ. ಬಾಲಕೃಷ್ಣ :— ನಬಾರ್ಡ್ ಸಾಲದ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಸಿ. ಭೈರೇಗೌಡ :— ಪ್ರಯತ್ನ ಮಾಡೋಣ.

ಶ್ರೀ ಸಿದ್ದರಾಮಯ್ಯ :— ನಬಾರ್ಡ ನಾರಮ್ಸ್‌ನಲ್ಲಿ ಬರಬೇಕಾಗುತ್ತದೆ. ಇದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಈಗ ಗೌರಿಬಿದನೂರು ತಾಲ್ಲೂಕನ್ನು ಸೇರಿಸುವ ಬಗ್ಗೆ ಒಂದು ತಿದ್ದುಪಡಿಯನ್ನು ತನ್ನಿ. ಮಾನ್ಯ ಕಾನೂನೂ ಮಂತ್ರಿಗಳು ಇದ್ದಾರೆ. ಅವರು ಈ ಅಧಿವೇಶನದಲ್ಲಿಯೇ ಒಂದು ತಿದ್ದುಪಡಿ ತನ್ನಿ. ಈ ಬಯಲು ಸೀಮೆ ಅಭಿವೃದ್ಧಿ ಮಂಡಲಿಯ ನಿಯಮಗಳಿಗೆ ಅನುಗುಣವಾಗಿ ಗೌರಿಬಿದನೂರು ತಾಲ್ಲೂಕು ನೇರವಾಗಿ ಬರಬೇಕು ಎನ್ನತಕ್ಕಂಥಾದ್ದು ಇದ್ದರೆ ಅದನ್ನು ಸೇರಿಸಿ ಒಂದು ತಿದ್ದುಪಡಿಯನ್ನು ತರೋಣ. ಬಯಲು ಪ್ರದೇಶ ಎಂದು ಹೇಳತಕ್ಕಂಥ ಒಂದು ಸೀಮೆಯ ವ್ಯಾಪ್ತಿಯಲ್ಲಿ ಅದು ಬರಬೇಕು. ಬಂದರೆ ಅದನ್ನು ನಾವು ಸೇರಿಸಿಕೊಳ್ಳಬೇಕಾಗುತ್ತದೆ ಸೇರಿಸಿಕೊಳ್ಳೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಅವರು ಹೇಳುವುದು ನನಗೆ ಗೊತ್ತಾಗುತ್ತದೆ. ಮಾನ್ಯ ಸಚಿವರು ಹೇಳುವುದು ಬಯಲುಸೀಮೆ ಅಭಿವೃದ್ಧಿ ಮಂಡಲಿಗೆ ಸೇರಬೇಕಾದರೆ ಕೆಲವು ನಿಯಮಾವಳಿಗಳು ಉಂಟು. ಬಿಲೋ 40 ಪರ್ಸೆಂಟ್ ನೀರಾವರಿಗೆ ಇರಬಾರದು ಎನ್ನುವ ಒಂದು ನಿಯಮ ಇದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಇರತಕ್ಕಂಥಾದ್ದು 28 ಪರ್ಸೆಂಟ್ ನಾವು ದಾಖಲೆಗಳನ್ನು ಕೊಟ್ಟಿದ್ದೇವೆ.

ಶ್ರೀ ಎಂ.ಸಿ. ನಾಣಯ್ಯ :— ನಿಯಮಗಳಲ್ಲಿ ಬಂದರೆ ಅದನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇಲ್ಲ.